ಅಪರಂಜಿ


ಸಂಪುಟ–೫
ಸಂಚಿಕೆ–೨
ನವೆಂಬರ್ 1987

ತಿಳಿನಗೆಯ ಕಾರಂಜಿ



- ಆನಂದ್
- ಯಾಲಕ್ಕಿ
- ಲೀಲಾ ಮಿರ್ಲೆ
- ಎಚ್. ಡುಂಡಿರಾಜ್
- ಶಿವು
- ರಾಮಪ್ಪ
- ಗಾಯತ್ರಿ

ಬಿಡಿಪತ್ರಿಕೆ :ಕೇವಲ ಒಂದೂವರೆ ರೂಪಾಯಿ





(ತಿಳಿನಗೆಯ ಕಾರಂಜಿ)

ಸಂಪುಟ ೫ | ನವೆಂಬರ್ 1987 | ಸಂಚಿಕೆ ೨

ಬಿಡಿ ಪ್ರತಿ : ಕೇವಲ ಒಂದೂವರೆ ರೂಪಾಯಿ
ವಾರ್ಷಿಕ ಚಂದಾ : 15 ರೂ.
ಆಜೀವ ಚಂದಾ : 150 ರೂ.
ಪೋಷಕರು : 500 ರೂ.

ಶಿವಕುಮಾರ್
ಸಂಪಾದಕ

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಅಪರಂಜಿ ಕಾರ್ಯಾಲಯ :
119 [ಹಳೆಯ 36], 6ನೆ ಮುಖ್ಯ ರಸ್ತೆ
ಮಲ್ಲೇಶ್ವರಂ, ಬೆಂಗಳೂರು 560003

ಈ ಸಂಚಿಕೆಯಲ್ಲಿ......

ವ್ಯಂಗ್ಯ ಚಿತ್ರಗಳು : ಅನಂತಯ್ಯ, ಸೂರಿ

ಮುದ್ರಣ : ಇಂಪ್ರೆಷನ್ಸ್, ಬೆಂಗಳೂರು–3 'ದೂರವಾಣಿ : 362989, 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೫ ನವಂಬರ್–1987 ಸಂಚಿಕೆ–೨

ಇವನಿಗಿಂತ ಬೇರೆಯ ನೋಟಕನಿಲ್ಲ

—ಬೃಹದಾರಣ್ಯಕ

ಬ್ರಹ್ಮವು ಸಾಕ್ಷಿ ಮತ್ತು ಚೈತನ್ಯ. ಅದು ತನಗೆರಡನೆಯದಿಲ್ಲದ್ದು. ಲೋಕದಲ್ಲಿ ಹಲವು ನೋಟಗಳನ್ನು ನೋಡುವ ಹಲವು ನೋಟಕರಿರುವಂತೆ ಕಾಣುತ್ತದೆ. ಅವರೆಲ್ಲರ ಚೈತನ್ಯವೂ ಒಂದೇ.

ಹಾಗೆಯೇ ಲೋಕದಲ್ಲಿ ಪ್ರಜೆಯೊಬ್ಬನೇ ನೋಡುವವನು. ತಾನು ಬಂಧನಕ್ಕೊಳಗಾದುದನ್ನು ತನ್ನನ್ನು ಬಿಡುಗಡೆಗೊಳಪಡಿಸಿ ಉದ್ಧಾರ ಮಾಡುವ ಮಾತನ್ನಾಡಿದುದನ್ನು, ಬಿಡಿಸಿದುದನ್ನು. ಕೆಡಿಸಿದುದನ್ನು, ಅಧ್ವಾನ ಮಾಡುತ್ತಿರುವುದನ್ನು ಅವನೇ ನೋಡಿದ್ದು. ಸ್ವದೇಶಿ, ಅಹಿಂಸೆ. ಸ್ವಾವಲಂಬನೆ, ಸರಳತೆ, ಅನಾಸಕ್ತಿ ಕರ್ಮಯೋಗ ಇವನ್ನು ನಂಬಿತಾನೇ ಅವನು ಹೋರಾಡಿದ್ದು.

ಈಗ ಭ್ರಷ್ಟಾಚಾರ, ಭಯೋತ್ಪಾದನೆ, ಕಂಪ್ಯೂಟರ್, ಕಲರ್ ಟಿ.ವಿ. ನೀರಿಗೆ, ಹೃದಯಕ್ಕೆ ಬರ ಇವನ್ನು ನೋಡುತ್ತಿರುವ ನೋಟಕ ಅವನೇ. ಅವನು ತಟಸ್ಥ, ಮೂಕ ಸಾಕ್ಷಿ.

ಅಪರಂಜಿ ಕಿಡಿ

—ಆನಂದ್

ಅತೃಪ್ತ ಶಾಸಕರಿಗೆ ಶಿಸ್ತಿನ ಕಟ್ಟುಪಾಡು.

—ಶೀರ್ಷಿಕೆ

ತೃಪ್ತ ಶಾಸಕರಿಗೆ ಶಿಸ್ತು ಬೇಡ ಅಂತಲೋ?

* * * *

ಕ್ರಿಕೆಟ್ ನಿಯಂತ್ರಣ ಮಂಡಲಿಗೂ ದೂರದರ್ಶನಕ್ಕೂ ನಡುವೆ ನಡೆದ ಆಟ ರಿಲೆಯನ್ಸ್ ಆಟಗಳಿಗಿಂತ ಕುತೂಹಲಕಾರಿ ಎಂಬುದು ಶುದ್ಧ ಕುಹಕ!

* * * *

ಭಾರೀ ಭದ್ರತಾ ವ್ಯವಸ್ಥೆಯ ನಡುವೆ ರಾಜಘಾಟ್‌ನಲ್ಲಿ ಪ್ರಾರ್ಥನಾ ಸಭೆ.

—ಸುದ್ದಿ

ಸುದ್ದಿ ಕೇಳಿ ಗಾಂಧೀಜಿ ನಸುನಕ್ಕರಂತೆ !

* * * *

ದೆಹಲಿಯಲ್ಲಿ ವಿಶ್ವ ಶಾಂತಿ ಮಹಾಯಾಗ

—ಪತ್ರಿಕೆ

ಹೋಮ ಮಾಡುವಾಗ ಅಲ್ಲಿ ನೀರು
ಇತ್ತೆಂಬುದು ಶುದ್ಧ ಕುಹಕ !

* * * *

ಸತಿ ಪದ್ಧತಿ ಪ್ರೋತ್ಸಾಹಿಸಿದವರಿಗೆ ಮರಣದಂಡನೆ.

—ಸುದ್ದಿ

ಅರೆ, ಅದೂ ಒಂದು ರೀತಿ ಸತೀನೇ ಆಗುತ್ತಲ್ಲ !

* * * *

ಭ್ರಷ್ಟಾಚಾರ ಆರೋಪ ಸಿ. ಬಿ. ಐ. ಗೆ ವಹಿಸಿ.

—ಶೀರ್ಷಿಕೆ

ಅಯ್ಯೋ ಪಾಪ! ಅವರೇನು ಮಾಡಿದರು?

*   *   *   *

ತುರ್ತು ಪರಿಸ್ಥಿತಿ ಹೇರಿಕೆ ಈಗ ಅಷ್ಟು ಸುಲಭವಲ್ಲ.

ಶ್ರೀ ಅಡ್ವಾನಿ

ಹಾಗೆ ಹೇಳಬೇಡಿ. ಯಾರಾದರೂ ಕೆರಳಿಯಾರು !


*   *   *   *

ಬೆಂಗಳೂರಿನ ಚರಿತ್ರೆ ಕುರಿತು ಸಮ್ಮೇಳನ.

—ಪತ್ರಿಕೆ

ಭವಿಷ್ಯವನ್ನು ಕುರಿತು ಮಾಡಿದ್ದರೆ ಉತ್ತಮವೇನೋ ?

*   *   *   *



"ಅವರ ದೇಶ ನೀಡೋ ಸಹಾಯದಲ್ಲಿ, ಒಂದು ಕ್ರಿಕೆಟ್ ಕೋಚಿಂಗ್ ಕ್ಯಾಂಪ್ ಕೂಡ ಸೇರಿದೆ ಸಾರ್ ! "

ರಿಲಯನ್ಸ್ ಹಾಡು-ಪಾಡು

—ಶಿವು

ಪ್ರೇಕ್ಷಕರು :

ಆಡಿದನೋ ಸಿದ್ಧು ಅದ್ಭುತದಿಂದಲಿ
ಮೆಕ್‌ಡರ್ಮಿಟ್ ಎಸೆತಪ ಸಿಕ್ಸರಿಗಿಕ್ಕುತ
ರನ್‌ಗಳ ಹೊಡೆಯುತ, ನಲಿದಾಡುತ ಓಡುತ
ಆಡಿದನೋ ಸಿದ್ಧು ಅದ್ಭುತದಿಂದಲಿ

ಶಿವರಾಮಕೃಷ್ಣನ್, ಕಪಿಲ್‌ಗೆ

ಎವಗಾವ ಬಹುಮಾನವನು ಕೊಡುವೆ ನೀನು
ನಿನಗಾಗಿಯನುದಿನವು ಬಳಲುತಿರುವೆನು ನಾನು
ರನ್ನುಗಳ ನೀಡುತ್ತ, ವಿಕೆಟಿನಾಸೆಯ ತೊರೆದು
ನೀಡಿರುವೆ ದಾಂಡಿಗರಿಗೆಲ್ಲ ಸಂತಸವ

ಬಾರ್ಡರ್, ಕಪಿಲ್‌ಗೆ

ಇಂದು ಜಯಿಸುವೆ, ನಾಳೆ ಜಯಿಸುವೆ
ಎಂಬ ಸೊಕ್ಕನು ಅಡಗಿಸು
ಜಯಿಸಿ ತೋರಿಸು, ಮೌನವನಾರಿಸು
ಅದುವೆ ಆಟದ ರೀತಿಯು

ವಿವ್ ರಿಚರ್ಡ್ಸ್ (ಪರಿತಾಪದಿಂದ)

ಗಾರ್ನರೆ ನೀ ಬಾ ವಿಂಡೀಸ್ ನಂದನ
ಮಾಲ್ಕಮ್ ಮಾರ್ಷಲನೆ ಬಾರೋ ॥
ಇಮ್ರಾನ್ ಮುದಸರರ ಗೋಣನೆ ಎತ್ತಿದ
ವಿಂಡೀಸ್ ತರುಣರೇ, ನೀವ್ ಬನ್ನಿರೋ ॥

ಎನ್. ಕೆ. ಪಿ. ಸಾಳ್ವೆ

ಇಮ್ರಾನ್ ಪಾಕಿಗೆ ಭೂಷಣಂ, ದಾಂಡಿಗರ್ಗೆ ಇಲಾಹಿ ಮಹಾ ಭೂಷಣಂ
ರಿಚರ್ಡ್ಸ್‌ಗೆ ಸಿಕ್ಸರ್ ಭೂಷಣಂ, ಭಾರತಮಿಗೆ ಇಂಗ್ಲೆಂಡೇ ಭೂಷಣಂ
ರನೌಟ್ ಸುನೀಲಗೆ ಭೂಷಣಂ, ಕಪಿಲಗೆ ಬಡಾಯಿಯೆ ಭೂಷಣಂ
ಕಪ್ಪಿಗೆ ಅಂಬಾನಿ ಭೂಷಣಂ, ಪರ ಹರಾ ಶ್ರೀ ಚೆನ್ನ ರಿಲಯೇಶ್ವರಾ॥



ಕೊರವಂಜಿಯಿಂದ

ಶುಭ ಸೂಚನೆ

—ಯಾಲಕ್ಕಿ.

ರತ್ನಳ ಜೊತೆಯವರೆಲ್ಲಾ ಸಿನಿಮ ನೋಡಿಕೊಂಡು ಬಂದು ಹೊಗಳಿದ್ದೂ ಹೊಗಳಿದ್ದೇ ! ಅದನ್ನು ಕೇಳಿ ರತ್ನಳ ಮನಸ್ಸು ಹೇಗಾಗಬೇಡ ! ಕೂಡಲೇ ತಾನೂ ಆ ದಿನವೇ ಹೋಗಬೇಕೆಂದು ಖಂಡಿತ ಮಾಡಿದಳು. ಮಧ್ಯಾಹ್ನ ಗಂಡನಿಗೆ ಬಡಿಸುತ್ತಿರುವಾಗಲೇ—"ಭಾಮರಾಜ್ಯ ಬಹಳ ಚೆನ್ನಾಗಿದೆಯಂತೆ—ಕಾವೇರಮ್ಮ ಹೇಳಿದಳು. ಅವಳು ಅವಳ ಯಜಮಾನರು ಮೂರು ಸಲ ಹೋಗಿದ್ದರಂತೆ—" ಎಂದು ಪೀಠಿಕೆ ಹಾಕಿದಳು.

ರಾಜ ನಿಧಾನವಾಗಿ ಮೊಸರನ್ನವನ್ನು ಅಗಿಯುತ್ತ—"ಅವರಿಗೆ ಮಾಡೋದಕ್ಕೆ ಬೇರೆ ಕೆಲಸವಿಲ್ಲ ; ದುಡ್ಡು ಹುಳಿತಾ ಇದೆ—"

"ಇರಬಹುದು—ಸೀತೆಗೂ ದುಡ್ಡು ಹುಳಿಯುತ್ತಿದೆ ಏನು ? ಅವಳ ಗಂಡ ನಿಮ್ಮ ಆಫೀಸಿನವನು ತಾನೇ ? ಅವನ ವರಮಾನ ನಿಮಗೆ ಗೊತ್ತಿಲ್ವೇ......? ಅವರು ಕೂಡ ನಿನ್ನೆ ಹೋಗಿದ್ರಂತೆ !"

"ಹೋಗಲಿ ಬಿಡು. ನಾವೂ ಒಂದು ದಿವ್ಸ ಹೋದರಾಯಿತು. ನಾನೇನು ಬೇಡ ಅಂದೆನೆ ? ಬೇಕಾದ್ರೆ ನಾಳೆ ಹೋಗೋಣ."

ನಾಳೆ......! ರತ್ನ ಅದನ್ನು ಒಪ್ಪುವ ಹಾಗಿಲ್ಲ. ಮನಸ್ಸಿಗೆ ಬಂದುದು ಅವಳಿಗೆ ಆಗಲೇ ಬೇಕು. ಉಪಾಯವಾಗಿ ಅದೂ ಇದೂ ಮಾತಾಡುತ್ತ ಅವಳು "ನಾಳೆ ಸಮಾಜದಲ್ಲಿ ಸರಸ್ವತೀ ಪೂಜೆ. – ನನಗೆ ಸಂಗೀತ ಹೇಳುವಂತೆ ಹೇಳಿದ್ರು. ನಾಳೆ ನನಗೆ ಆಗುಲ್ಲ ; ಇವತ್ತೇ ಹೋಗಿದ್ರೆ ಚೆನ್ನಾಗಿತ್ತು—" ಎಂದಳು.

"ಇವತ್ತು ನಂಗೆ ಆಗುಲ್ಲ, ರತ್ನ. ಶೀನಪ್ಪ ನಾನು ಇಬ್ಬರೂ ಇನ್ನೆಲ್ಲಿಗೋ ಹೋಗ್ಬೇಕೆಂದು ಒಂದು ವಾರದಿಂದ ಪ್ರೋಗ್ರಾಂ ಹಾಕಿಕೊಂಡಿದೇವೆ. ನಾಳೆ ಅಲ್ಲದಿದ್ದರೆ ನಾಡಿದ್ದಾಯಿತು. ಏನು ಸೂರೆ ಹೋಗೋದು ?" ರಾಜ ಹೇಳಿದ.

ಆದರೆ ರತ್ನ ಅಷ್ಟು ಬೇಗ ಸೋಲನ್ನು ಒಪ್ಪುವಳೆ ? ರಾಜ ಕೈ ತೊಳೆಯಲು ಹೋದ ಕೂಡಲೇ ಅವಳು ಹಿಂದಿನಿಂದ ಟವಲನ್ನು ಎತ್ತಿಕೊಂಡು ಹೋದಳು. ರಾಜ ಅವಳಿಗಿಂತ ಹುಷಾರಿ ! ಅವಳು ಬರುವ ಮೊದಲೆ ಕೈ ತೊಳೆದ ಶಾಸ್ತ್ರಮಾಡಿ ಅಲ್ಲಿಂದ ಪರಾರಿಯಾಗಿದ್ದ. ರತ್ನ ಮನಸ್ಸಿನಲ್ಲೇ ನಗುತ್ತ ಒಳಗೆ ಬಂದು ಎಲೆಗೆ

ಸುಣ್ಣ ಹಚ್ಚುತ್ತ ಇರುವಾಗಲೇ ರಾಜ ಅವಸರವಾಗಿ ಹೇಗೋ ಕೋಟು ತಗುಲಿಸಿಕೊಂಡು ಟೋಪಿ ಇಟ್ಟುಕೊಳ್ಳುತ್ತ ಬೀದಿಗೆ ಬಂದು ಅಲ್ಲಿಂದಲೇ—, "ರತ್ನ...... ನನಗೆ ಅಡಿಗೆ ಬೇಡ ಹೊತ್ತಾಯ್ತು. `ಗಡಿಯಾರ ನಿಂತ್ಹೋಗಿದೆ. ಮುಂಚೆ ನೋಡಿಕೊಳ್ಳಿಲ್ಲ" ಎಂದು, ಹೊರಟು ಹೋದ.

ರತ್ನ ಸ್ವಲ್ಪ ಪೆಚ್ಚಾದಳು. ಅವಳು ಮಾಡುತ್ತಿದ್ದ ಯೋಚ್ನೆ ಅಲ್ಲಿಗೇ ಕಡಿದಂತಾಯಿತು. ಎಲೆಯನ್ನು ಎಡಗೈಲಿ ಹಿಡಿದುಕೊಂಡೇ ಹೊರಗೆ ಬಂದು ನೋಡಿದಳು. ರಾಜ ಆಗಲೇ ಬೀದಿಯ ಕೊನೆಯನ್ನು ಸೇರಿದ್ದ. ರತ್ನ ಬಾಗಿಲು ಹಾಕಿಕೊಂಡು ತಲೆ ಎತ್ತಿ ನೋಡಿದಳು. ಗಡಿಯಾರ ನಿಂತ್ಹೋಗಿರಲಿಲ್ಲ. ಟಿಕ್ ಟಿಕ್ ಎಂದು ತಲೆದೂಗುತ್ತ ರತ್ನನ್ನ ಅಣಕಿಸಿತು ! ನೋಡಿದರೆ ಇನ್ನೂ ಹತ್ತೂಕಾಲು—

ರತ್ನ ಹೇಗೋ ಒಳಗೆ ಹೋಗಿ ಊಟ ಮಾಡಿದಳು. ಆ ದಿನ ಅವಳಿಗೆ ಊಟ ರುಚಿಸಲಿಲ್ಲ. ಎಂದೂ ಒಬ್ಬಳೇ ಕೂತು ಊಟ ಮಾಡಿ ಅಭ್ಯಾಸವಿರಲಿಲ್ಲ. ಸಾಮಾನ್ಯವಾಗಿ ಮಾಡಿದ ಅಡಿಗೆಯನ್ನು ಮಧ್ಯೆ ಇಟ್ಟುಕೊಂಡು ಇಬ್ಬರೂ ಕೂರುವುದು ಪದ್ಧತಿ. ಇಲ್ಲದಿದ್ದರೆ ರಾಜನಿಗೆ ಬಡಿಸಿ ಅವಳು ಕೂಡುತ್ತಿದ್ದಳು. ಅವನು ಕೈ ತೊಳೆದು ಬಂದು ಅವಳಿಗೆ ಬಡಿಸುತ್ತಿದ್ದ ಅಂಥ ದಿವಸದ ಅವಾಂತರವಂತೂ ಹೇಳುವಂತಿರಲಿಲ್ಲ. ಊಟ ಮುಗಿಯುವ ಹೊತ್ತಿಗೆ ಒಂದು ಪುಟ್ಟ ಯುದ್ಧವೇ ಆಗುತ್ತಿತ್ತು ! ರಾಜ ಬಡಿಸುವಾಗ, ರಾತ್ರಿಗೆ ಮಾಡಿದ್ದನ್ನೂ ಆಗಲೇ ಹಾಕಿಬಿಡುತ್ತಿದ್ದ ಈ ದಿನ ಆಟವಿಲ್ಲ ಜಗಳವಿಲ್ಲ ! ಊಟ ಬೇಸರವಾಯಿತು. ಕೆಲಸ ಮಾಡಲೂ ಬೇಕಿಲ್ಲ. ಮಧ್ಯಾಹ್ನವೆಲ್ಲಾ ಯೋಚಿಸಿ, ಹೇಗಾದರೂ ಆ ದಿನ ಹೋಗಲೇಬೇಕೆಂದು ಪುನಃ ಖಂಡಿತ ಮಾಡಿದಳು. ಬೇಗ ಬೇಗ ಕಾಫಿ ತಿಂಡಿ ಮಾಡಿಟ್ಟು, ಅದೇ ಒಲೆಯ ಮೇಲೆ ರಾತ್ರಿಗೆ ಅಡಿಗೆಯನ್ನೂ ಮಾಡಿ ಮುಚ್ಚಿಟ್ಟು—ತಲೆ ಬಾಚಿ ಹೂ ಮುಡಿದುಕೊಂಡು ಹೊಸ ಸೀರೆ ಉಟ್ಟು ಸಿದ್ಧಳಾದಳು.

ಐದೂವರೆಗೆ ಮನೆಗೆ ಬಂದಾಗ ರಾಜ ರತ್ನಳ ಸಿದ್ಧತೆಯನ್ನು ನೋಡಿ ಬೆರಗಾದ. ಶೀನಪ್ಪನೂ ಜೊತೆಯಲ್ಲಿದ್ದರೆ ರತ್ನ ಮಾತಾಡುವಂತಿಲ್ಲ. ಹೇಗೋ ಕಾಫಿ ಕುಡಿದು ಅವನ ಸಂಗಡ ಹೊರಟುಬಿಟ್ಟರೆ ಆಯಿತು......ಹೂಂ......ಒಂದು ದಿವಸವಾದರೂ ಗಂಡಸಿನ ಹಟ ಗೆಲ್ಲಬೇಡವೇ ?

ಆದರೆ, ಶೀನಪ್ಪ ರಸ್ತೆಯಲ್ಲಿ ಯಾರೊಡನೆಯೋ ಹರಟೆಗೆ ನಿಂತ. ರಾಜನಿಗೆ ಪೇಚಾಟಕ್ಕೆ ಬಂತು. ಅವನು ಬರುವ ಮೊದಲೇ ರತ್ನಳ ಕೈಗೆ ಒಬ್ಬನೇ ಸಿಕ್ಕಬೇಕಾಗಬಹುದೇನೋ ಎಂದುಕೊಂಡು ರೂಮಿನಿಂದ ಹೊರಗೆ ಬರದೆ ಬಟ್ಟೆ ಬದಲಾಯಿಸುವವನಂತೆ ಅಲ್ಲೇ ಸುತ್ತಾಡುತ್ತಾ, ಶೀನಪ್ಪನನ್ನು ಕಾಯುತ್ತ ಕಿಟಕಿಯನ್ನೇ ನೋಡುತ್ತ ಶಪಿಸುತ್ತಿದ್ದ !

ಶೀನಪ್ಪ ಬರಲಿಲ್ಲ. ಅವನು ಬಂದಿರುವ ವಿಚಾರವೂ ರತ್ನಳಿಗೆ ಗೊತ್ತಿಲ್ಲ.

ಅವಳು ರಾಜ ಒಳಗೆ ಬರುವುದನ್ನು ಕಾಯದೆ ಬೇಗ ತಿಂಡಿ ಕಾಫಿ ಎರಡನ್ನೂ ಒಟ್ಟಿಗೇ ತಂದು ಮುಂದಿಟ್ಟು "ಹೇಗಿದ್ದರೂ ಬೇಗ ಬಂದಿದೀರಲ್ಲ ಹೋಗೋಣವೇ ?" ಎಂದು ಕೇಳಿದಳು. ಅವಳು ಪ್ರಶ್ನೆ ಕೇಳಿದಾಗಿನ ನೋಟ—ಅವಳ ದನಿಯ ಮಾಧುರ್ಯ.......ಇದರ ಎದುರು ಅವನ ಹಟ ಆಗಲೇ ಮೆಲ್ಲಗೆ ಹಿಂದಕ್ಕೆ ಸರಿಯುತ್ತಿತ್ತು !

"ರತ್ನ......ಶೀನಪ್ಪ ಬಂದಿದಾನೆ. ಅವನಿಗೂ ಕಾಫಿ ಇದೆಯೆ ?"

"ನನ್ನ ಕಾಫಿ ಇದ ಅದೇ ಕೊಟ್ಟುಬಿಡಿ. ನನಗೇನೂ ಬೇಡ......

"ಬೇಡಾ.........ಬೇಡಾ.........ಇದರಲ್ಲೇ ಇಬ್ಬರೂ ಮಾಡ್ಕೋತೇವೆ. ನೀನು ಕುಡಿ"

"ಪರವಾಗಿಲ್ಲ, ಎಂದು ಹೇಳುತ್ತ ರತ್ನ ಕಾಫಿ ತಂದು ಇಟ್ಟಳು. ಅವಳ ಸಡಗರವನ್ನು ನೋಡಿ ರಾಜನ ಮನಸ್ಸು ಉಯ್ಯಾಲಾಡಿತು. ಪಾಪ......ಎಷ್ಟೋ ಆಸೆಯಾಗಿದ್ದಾಳೆ. ಇವತ್ತೇ ಹೋಗೋಣ. ಕಾಫಿ ಕೊಟ್ಟು ಶೀನಪ್ಪನನ್ನು ಕಳಿಸಿ ಬಿಟ್ಟರಾಯಿತು. ಮದುವ ಮನೆಗ ಬಂದು ಸುಳ್ಳು ಬಿಟ್ಟರ ಅವ ನೇನೂ ಬೆನ್ನು ಹತ್ತಲಾರ ಎಂದುಕೊಂಡು—, "ರತ್ನ......ನಿನ್ನ ಕರೀ ಸೀರೆ ಉಟ್ಟುಕೊಂಡಿದ್ದರೆ ಚೆನ್ನಾಗಿತ್ತು. ಬಹಳ ಚೆನ್ನಾಗಿ ಒಪ್ಪುತ್ತೆ—" ಎಂದ.

ರತ್ನ ಆಸೆಯಿಂದ ಕಣ್ಣರಳಿಸಿ—

"ಹಾಗಾದ್ರೆ...ಹೋಗೋಣೇನು ? ಅದಕ್ಕೇನು—ಈಗಲೂ ಉಟ್ಕೊಂಡ್ಬಿಡ್ತೀನಿ......ಇನ್ನೂ ಹೊತ್ತಿದೆಯಲ್ಲ !" ಎಂದಳು.

"ಹೂ......ಉಟ್ಕೋ......ಶೀನಪ್ಪನ್ನ ನಾಲ್ಕು ಮಾತಾಡಿಸಿ ತಲೆ ಸವರಿ ಕಳ್ಸಿಬಿಡ್ತೇನೆ......!"

ರತ್ನ ಕರೀ ಸೀರೆ ಉಟ್ಟುಕೊಂಡು ಬಂದಳು. ಶೀನಪ್ಪ ಆಗತಾನೇ ಬಂದು ಕಾಫಿ ಕುಡೀತಿದ್ದ, ಹೊತ್ತು ಆರು ಹತ್ತು ನಿಮಿಷವಾಗಿತ್ತು.

"ರತ್ನ ನೀನು ಹೊರಡು ಹೊತ್ತಾಗುತ್ತೆ. ನಿನ್ನ ನಡಿಗೆ ನಿದಾನ...... ಸುಬ್ರಾಯನ ಕೆರೆ ದೊಡ್ಡ ರಸ್ತೇಲಿ ಹೋಗ್ತಿರು. ನಾನೂ ಬೀಗ ಹಾಕಿಕೊಂಡು ಬೇಗ ಬಂದುಬಿಡ್ತೇನೆ."

ರತ್ನ ಹೊರಟಳು. ಕತ್ತು ಬಗ್ಗಿಸಿಕೊಂಡು ಸ್ವಲ್ಪ ದೂರ ಹೋದಮೇಲೆ ಹಿಂದ ನೋಡಿದಳು. ಹಾಗೇ ಎರಡು ಬೀದಿ ದಾಟಿದ್ದಾಯಿತು. ಆಗಲೂ ಅವನ ಸುಳಿವಿಲ್ಲ ! ನಡಿಗೆಯ ವೇಗ ಕಡಿಮೆ ಮಾಡಿದಳು. ಸುಮ್ಮನೆ ಹಿಂದೆ ಹಿಂದೆ

ನೋಡುತ್ತಿದ್ದರೆ ಬೀದಿಯಲ್ಲಿ ಹೋಗುವವರು ಏನೆಂದುಕೊಂಡಾರೆನ್ನಿಸಿತು. ಮನಸ್ಸಿಗೆ ಬೇಸರವಾಯಿತು. ಹೊತ್ತೋ ಮೀರುತ್ತಾ ಬಂದಿದೆ. ಎಷ್ಟು ಮೆಲ್ಲಗೆ ನಡೆದರೂ. ಥಿಯೇಟರು ಸಿಕ್ಕೇ ಬಿಟ್ಟಿತು ! ಆಗಲೂ ರಾಜನ ಪತ್ತೆ ಇಲ್ಲ !......

ರಾಜ ಗೆಳೆಯನನ್ನು ಹೊರಡಿಸಿಕೊಂಡು ಮನೆ ಬಾಗಿಲಿಗೆ ಬೀಗ ಹಾಕಿಕೊಂಡು ಹೊರಟ. ಸ್ವಲ್ಪ ದೂರ ಹೋದಮೇಲೆ ಶೀನಪ್ಪ ತನ್ನ ಕೆಲಸದ ಮೇಲೆ ಹೊರಟು ಬೇರೆ ಕಡೆಗೆ ತಿರುಗಿದ. ರಾಜ ಒಬ್ಬನೇ ಮುಂದಾದ. ರಸ್ತೆಯ ಕೊನೆಯವರೆಗೂ ದೃಷ್ಟಿಯನ್ನು ಓಡಿಸಿದ. ಎಲ್ಲೂ ರತ್ನ ಕಾಣಿಸಲಿಲ್ಲ. ಎಷ್ಟು ಬೇಗ ಹೋಗಿದಾಳೆ ಎಂದುಕೊಂಡು ಬೇಗ ಬೇಗ ಹೆಜ್ಜೆ ಹಾಕಿದ. ಅಲ್ಲೇ ರಸ್ತೆ ಕವಲೊಡೆಯುವುದು. ಅವಳು ಅಲ್ಲಿಗೆ ಬರುವುದರೊಳಗೆ ತಾನೂ ಅಲ್ಲಿಗೆ ಬರಬಹುದೆಂದು ರಾಜ ಲೆಖ್ಖ ಹಾಕಿದ್ದ, ಆದರೆ......ಈಗ ಯಾವ ಕಡೆಗೆ ತಿರುಗೋದು ? ......ದೇವರ ಮೇಲೆ ಭಾರ ಹಾಕಿ ಎಡಕ್ಕೆ ತಿರುಗಿದ. ರತ್ನ ಈ ಕಡೆಯೇ ಹೋಗಿರಬೇಕು...... ಎಷ್ಟಾದರೂ ಗಂಡ ಹೆಂಡತಿ... ! ದೂರದಲ್ಲಿರಲಿ ಹತ್ತಿರದಲ್ಲಿರಲಿ...ಆಲೋಚನೆ ಒಂದೇ......! ಅವನ ಊಹೆ ತಪ್ಪಾಗಲಿಲ್ಲ......ರಸ್ತೆಯ ಕೊನೆಯ ಅಂಚಿನಲ್ಲಿ ......ದೂರದಲ್ಲಿ ಕರಿಯ ಸೆರಗು ಕಾಣಿಸಿತು. ರಾಜ ಇಮ್ಮಡಿಯ ಉತ್ಸಾಹದಿಂದ ಬೇಗ ಬೇಗ ನಡೆದ. ಎದುರಿಗೆ ಬರುತ್ತಿದ್ದವರು ಬೆರಗಾಗಿ ಸ್ವಲ್ಪ ಅನುಮಾನ ದಿಂದ ಅವನ ಕಡೆ ನೋಡಿದರು. ಆದರೂ, ರತ್ನ ಎಷ್ಟುಬೇಗ ನಡೆಯುವುದನ್ನು ಕಲಿತುಬಿಟ್ಟಿದಾಳೆ ! ಅವಳ ಜೊತೆ ಬಂದಾಗಲೆಲ್ಲ ಮೆಲ್ಲಗೆ ನಡೆದು ಕಾಲು ನೋವು ಬಂದು ಬಿಡುತ್ತಿತ್ತು......ಅದಕ್ಕೇ ಅವಳನ್ನು ಮುಂದೆ ಹೋಗುವಂತೆ ಹೇಳಿದ್ದು ......ಹೀಗೆಂದು ಗೊತ್ತಿದ್ದರೆ ಒಟ್ಟಿಗೇ ಹೊರಡಬಹುದಾಗಿತ್ತಲ್ಲಾ !

ತಟಕ್ಕನೆ ಕರೀ ಸೀರೆ ಎಲ್ಲೂ ಕಾಣಲಿಲ್ಲ. ರಾಜ ಗಾಬರಿಯಾಗಿ ಮುಂದೆ ಓಡಿದ. ಸ್ವಲ್ಪ ದೂರ ಹೋದಮೇಲೆ ಬಲಗಡೆಗೆ ತಿರುಗಿದಾಗ, ರಸ್ತೆಯಲ್ಲಿ ಅದೇ ಸೆರಗು ಮುಂದೆ ಮುಂದೆ ಹೋಗುತ್ತಿತ್ತು.

ಏನು ನಾಚಿಗೆ ಕೇಡು ! ಅಷ್ಟು ದಿವಸಗಳಿಂದ ಮೈಸೂರಲ್ಲಿದ್ದು ಮಾರ್ಕೆಟ್ಟಿನ ದಾರಿ ಗೊತ್ತಿಲ್ಲವೆ ? ಹುಂ......ಈ ಹೆಂಗಸರದ್ದೆಲ್ಲಾ ಹುಚ್ಚು ಹುಚ್ಚು...... ಈ ಕಡೆ ಯಾಕೆ ತಿರುಗಿದಳೋ......? ಯಾರಾದರೂ ಗುರುತಿನವರು ಕೂಗಿದ ರೇನೋ......ಇರುತ್ತಲ್ಲಾ......ಓಹೋ ಯಾರೋ ಮಾತಾಡ್ತಿರೋ ಹಾಗಿದೆ ...ಆಯಿತು...ಇಬ್ಬರು ಹೆಂಗಸರು ಮಾತಿಗೆ ನಿಂತು ಹೋಯ್ತು, ಗೊತ್ತಾಗೋ ದಿಲ್ಲಾ......ಹೊತ್ತು......? ಹೌದು... ! ರಾಜ ಗಡಿಯಾರ ನೋಡಿಕೊಂಡ. ಆರು ಗಂಟೆ ಇಪ್ಪತ್ತೈದು ನಿಮಿಷ ! ರೆಕ್ಕೆ ಕಟ್ಟಿಕೊಂಡು ಹಾರಿದರೆ ಮಾತ್ರ ಇನ್ನು ಐದು ನಿಮಿಷದಲ್ಲಿ......ಚಿತ್ರ ಮೊದಲಾಗುವ ಹೊತ್ತಿಗಾದರೂ ಅಲ್ಲಿರಲು ಸಾಧ್ಯ ...... ! ಥು ...... ಇವತ್ತು ಶೀನಪ್ಪನನ್ನು ಕರೆದದ್ದೇ ತಪ್ಪಾಯ್ತು ! ಇಲ್ಲದಿದ್ರೆ

ಇಷ್ಟೊತ್ತಿಗೆ ಇಬ್ಬರೂ ಒಟ್ಟಿಗೆ ಹೋಗಿ ಹಾಯಾಗಿ ಚಿತ್ರ ಮಂದಿರದಲ್ಲಿ ಕೂತಿರ ಬಹುದಾಗಿತ್ತು !

ಇದೇನು ಬಂತು ? ರಾಜನ ಯೋಚನೆಯೆಲ್ಲಾ ಒಂದೇ ಸಲ ಚದರಿ ಹೋಯಿತು. ಕರೀ ಸೀರೆ. ಮಾತಾಡುತ್ತಿದ್ದ ಹಾಗೆ, ಒಂದು ಮನೆಗೆ ನುಗ್ಗಿ ಬಿಟ್ಟಿತು.

ರಾಜನಿಗೆ ವಿಪರೀತ ಸಿಟ್ಟು ಬಂತು. ಮೊದಲು ಹೋಗಬೇಕೆಂದು ಹಟ ವೇನು ? ಈಗ ದಾರಿಯಲ್ಲಿ ಕಂಡವರ ಮನೆಗೆಲ್ಲಾ ನುಗ್ಗುವುದೇನು ? ಛೆ...ಪಾಪ ......ಕುಂಕುಮ ಇಟ್ಕೊಂಡು ಹೋಗು ಎಂದರೇನೋ...... ? ಇರುತ್ತಲ್ಲ...... ಹೆಂಗಸರ ......ಶಾಸ್ತ್ರ ! ಸಿಟ್ಟಿನಲ್ಲೇ ಸಮಾಧಾನ ತಂದುಕೊಂಡ ರಾಜ. ಆದರೆ, ತಾಳ್ಮೆಗೂ ಕೊನೆಯಿಲ್ಲವೆ ? ಎಷ್ಟೊತ್ತು ಕಾಯುವುದು......ಕುಂಕುಮ ಕೊಡು ವುದಕ್ಕೆ ಇಷ್ಟು ಹೊತ್ತೆ......? ಒಂದು ಗಂಟೆಯಿಂದ ಹೀಗೆ ರಸ್ತೆ ಕೊನೆಯಲ್ಲಿ ಠಲಾಯಿಸುತ್ತಿದ್ದರೆ ನೋಡಿದವರು ಪೋಕರಿ ಎಂದುಕೊಳ್ಳೋದಿಲ್ವೆ......? ಛೇ... ......ಈಗಿನ ಹುಡುಗಿಯರಿಗೆ ಗಂಡ ಎಂದರೆ ಸ್ವಲ್ಪವೂ ಭಯ ಭಕ್ತಿ ಇಲ್ಲ...... ಕೊಂಚ ಸಲಿಗೆ ಕೊಟ್ಟ ಮಾತ್ರಕ್ಕೇ......ಗಂಡನನ್ನು ಹೀಗೆ ಕೋತಿಯಂತೆ ಕುಣಿಸುವುದೇ.......... ಛೆ...ಛೇ.....

ಗಸ್ತು ತಿರುಗಿ ಸುಸ್ತಾಗಿ ಕೊನೆಗೆ ಮನೆಯ ಕಡೆ ಹೆಜ್ಜೆ ಹಾಕಿದ, ರಾಜ !

ಬಾಗಿಲ ಬಳಿ ಕರೀ ಸೀರೆ ಉಟ್ಟು ಕಣ್ಣು ಕೆಂಪಗೆ ಮಾಡಿಕೊಂಡು ಬೀಗ ನೋಡುತ್ತ ರತ್ನ ಅಲ್ಲೇ ಹಾಜರು ! ಇಬ್ಬರಿಗೂ ಒಬ್ಬರನ್ನೊಬ್ಬರು ನುಂಗಿಬಿಡು ವಷ್ಟು ಕೋಪ. ರಾಜ ಮಾತಿಲ್ಲದೆ ಜೇಬಿಗೆ ಕೈ ಹಾಕಿ ಬೀಗದ ಕೈ ತೆಗೆದು ಬೀಗ ತೆಗೆದ. ರತ್ನ ಸದ್ದಿಲ್ಲದೆ ಒಳಗೆ ಬಂದಳು. ಸರಬರನೆ ಓಡಾಡಿದಳು. ಕಳ್ಳನಂತೆ ಮೆಲ್ಲಗೆ ರಾಜ ಅವಳನ್ನು ಹಿಂಬಾಲಿಸಿ—"ರತ್ನ........." ಎಂದು ಕರೆದ. ಒಂದೇ ಸಲಕ್ಕೆ ಗುಡುಗು, ಸಿಡಿಲು......ಮಿಂಚು......ಮಳೆ ಎಲ್ಲ ಮೊದಲಾಯಿತು. "ಇಷ್ಟವಿಲ್ಲದಿದ್ದರೆ......ಬಾಯ್ಬಿಟ್ಟು ಬೇಡ್ವೆಂದು ಹೇಳ್ಬಾರ್ದೇನೋ......ಮರ್ಯಾ ದಸ್ಥರ ಮನೆ ಹೆಂಗಸು ಒಂಟಿಯಾಗಿ ಸಿನೀಮಾ ಬಾಗಿಲ ಬಳಿ ನಿಂತಿದ್ದರೆ ಎಷ್ಟು ಚೆನ್ನವೋ...... ? ನೋಡೋರಿಗೆ ನಾಲ್ಕು ಕಣ್ಣಾಗುತ್ತೆ ! ನನ್ನನ್ನು ಮುಂದೆ ಕಳಿಸ್ಬಿಟ್ಟು ಎಲ್ಲಿಗೆ ಹೋಗಿದ್ರೋ...ಅಲೆಯುಕ್ಕೆ ?" ರತ್ನ ಗುಡುಗಿದಳು.

ರಾಜ ದೈನ್ಯದಿಂದ ಕರೀ.ಸೀರೇನ ಅನುಸರಿಸಿ ಹೋದ ಕತೆ ಹೇಳಿದ. ರತ್ನ ಅಳುವಿನಲ್ಲೇ ನಕ್ಕಳು.

"ಹೇಗೂ ಅಲ್ಲೀವರೆಗೂ ಹೋಗಿದ್ದೆ......ನಾನು ಬರದಿದ್ರೆ ಏನಾಯ್ತು ? ಒಳಗೆ ಹೋಗಬಾರ್ದಾಗಿತ್ತೆ...?" ರಾಜ ಕೇಳಿದ.

"ಹೇಗೆ ಹೋಗೋದು......? ಕಾಸಿಲ್ಲದೆ ಒಳಗೆ ಬಿಡಲು ಅವನೇನು ಚಿಕ್ಕಪ್ಪನ ಮಗನೇ ? ನೀವು ಹೇಗಿದ್ದರೂ ಬರ್‍ತೀರೆಂದು ಪರ್ಸ್ ಕೂಡ ತಗೊಂಡು ಹೋಗ್ಲಿಲ್ಲ..."

"ಅಯ್ಯೋ—ಪಾಪವೇ—ಆಮೇಲೇನು ಮಾಡ್ದೆ ?"

"ಮಾಡೋದೇನು—?' ಒಂದೆರಡು ನಿಮಿಷ ಬಾಗಿಲು ಹತ್ರ ನಿಂತಿದ್ದೆ—ನೀವು ಬರ್‍ಲಿಲ್ಲ. ಅಲ್ಲಿ ನಿಂತಿರೋಕೆ ನಾಚಿಕೆ. ಎದುರ್ಗೇ ಒಂದು ಆಟದ ಸಾಮಾನಿನ ಅಂಗಡಿ ಇತ್ತು. ಅಲ್ಲಿಗೆ ಹೋಗಿ ವ್ಯಾಪಾರಾ ಮಾಡೋಳಂತೆ ಅದೂ ಇದೂ ನೋಡ್ತಾ ನಿಂತಿದ್ದೆ. ಕರ್ಚೀಫಿನ ಕೊನೇಲಿ ಎಂದೋ ಕಟ್ಟಿದ್ದ ಎರಡಾಣೆ ಇತ್ತು ; ಅದಕ್ಕೆ ಈ ಗಿಲಿಕಿ ಕೊಂಡ್ಕೊಂಡೆ— !"

"ಗಿಲಕೀನೇ—!"

"ಹು— ಎರಡಾಣೆಗೆ ಇನ್ನೇನು ಬರುತ್ತೆ ? ಅಷ್ಟು ಹೊತ್ತಿಗೆ ಆಟ ಮೊದಲಾಯಿತೇನೋ———ಬಾಗಿಲು ಹಾಕಿದರು. ಹೋದ ದಾರಿಗೆ ಸುಂಕವಿಲ್ದೆ———ಪೆಚ್ಚು ಮುಖ ಹಾಕ್ಕೊಂಡು ಬಂದದ್ದಾಯ್ತು—"

"ಎಲ್ಲೀ ಕೊಡು ನೋಡೋಣ. ನಿಜವಾಗಿ ಬಹಳ ಚೆನ್ನಾಗಿದೆ. ಈ ಕಾಲ್ದಲ್ಲಿ ಎರಡಾಣೆಗೆ ಸಿಕ್ಕಿದ್ದು ಅಗ್ಗವೆಂದೇ ಹೇಳ್ಬೇಕು. ನೀನು ಅರ್ಧ ಗಂಟೆಯಾದರೂ ಇದಕ್ಕೆ ಚೌಕಾಶಿ ಮಾಡಿರ್ಬೇಕು———ಅಲ್ವೇ———? ಹೋಗ್ಲಿ ಬಿಡು———ಶುಭ ಸೂಚನೆ—!"

———

13

ನೇಮ ಘಾತಕಿ

—ಲೀಲಾ ಮಿರ್ಲೆ

ನನ್ನ ಜಾತಕದಲ್ಲಿ ಗ್ರಹಗಳು ತಪ್ಪು ತಪ್ಪು ಜಾಗಗಳಲ್ಲಿ ಇವೆ ಎನ್ನುವುದು ಖಂಡಿತ. ಏಕೆಂದರೆ ನನ್ನ ಉದ್ದೇಶ ಎಷ್ಟೇ ಒಳ್ಳೆಯದಾಗಿದ್ದರೂ ಮಹಾ ದೋಷ ಗಳನ್ನು ನನ್ನ ಕೈಯಿಂದ ಈ ಗ್ರಹಗಳು ಮಾಡಿಸಿವೆ. ಅವುಗಳ ಕೈಗೊಂಬೆಯಾಗಿರುವ ನಾನು ಪಾಪಗಳ ಹೊರೆಯನ್ನು ಹೊರಲಾರದೆ ಹೊತ್ತಿದ್ದೇನೆ.

ಏಕೀ ಪ್ರಲಾಪ. ಪಾಯಿಂಟಿಗೆ ಬನ್ನಿ ಅಂದ್ರಾ ? ಬಂದೆ.

ರಾಜು ಮಾವ-ನಮ್ಮನೆಯಲ್ಲಿ ಇಳಿದುಕೊಂಡಿದ್ದರು. ಯಾವುದೊ ಡಿನ್ನರ್ ಪಾರ್ಟಿಗೆ ನಮಗೆ ಆಹ್ವಾನ ಬಂತು. ರಾಜು ಮಾವನನ್ನು ಕರೆದುಕೊಂಡು ಊಟಕ್ಕೆ ಹೊರಟವು. ಅವರಿಗೆ ಅಲ್ಲಿಗೆ ಬರಲು ಸುತರಾಂ ಇಷ್ಟವಿರಲಿಲ್ಲ.

"ಅಮ್ಮಾ, ಯಾಕ್ ಬಲವಂತ ಮಾಡ್ತಿ. ನಂಗೆ ಆ ಬುಫೆ ಊಟ ಸರಿಹೋಗಲ್ಲ. ಲಕ್ಷಣವಾಗಿ ಕೂತು ಊಟ ಮಾಡೊ ನಮ್ಮಂತಹವರಿಗೆ, ಒಂದ್ ಕೈಲಿ ತಟ್ಟೆ ಹಿಡಿದು, ಎರಡ್ ಕಾಲ್ ಮೇಲ್ ನಿಂತು ಊಟ ಮಾಡೋದು ಒಂಥರ ಶಿಕ್ಷೆ ಇದ್ದ ಹಾಗೆ" ಅಂತೆಲ್ಲಾ ಗೋಳಾಡಿದರು. ಆದರೂ ಪಾಪ, ನಮ್ಮ ಬಲವಂತಕ್ಕೆ ಬಂದರು.

ರಾಜುಮಾವ ಅಂದುಕೊಂಡ ಹಾಗೆ ಅಲ್ಲಿಯ ಯಾವ ಅಡುಗೆಯೂ ಅವರಿಗೆ ಸೇರುವ ಹಾಗಿರಲಿಲ್ಲ. ಪುಲಾವಿಗೆ ಆಡ್ಡ ವಾಸನೆ, ಪಲ್ಯಕ್ಕೆ ಅದೆಂತದೊ ಲೋಳೆ ಸಾಸ್ ಹಾಕಿಬಿಟ್ಟಿದ್ದರು. ಉಪ್ಪಿನಕಾಯಲ್ಲಿ ವಿನೀಗರು, ಸಾಂಬಾರಿನಲ್ಲಿ ಬೆಳ್ಳುಳ್ಳಿ, ಹೀಗೆ ಎಲ್ಲಾ ವರ್ಜ್ಯವಾದ ಮೇಲೆ ಕೊನೆಗುಳಿದಿದ್ದು ಖಾಲಿ ಮೊಸರನ್ನ. ಅದೇ ಸಾಕು ನಂಗೆ ಅಂತ ತಟ್ಟೆಗೆ ಒಂದಿಷ್ಟು ಮೊಸರನ್ನ ಹಾಕಿಕೊಂಡರು. ಪಾಪ ನೆಂಚಿಕೊಳ್ಳಕ್ಕೂ ಏನೂ ಇಲ್ವಲ್ಲಾ ಅಂತ ನಾನು ಪೇಚಾಡುತ್ತಿರುವಾಗ ಟೇಬಲ್ ಕೊನೆಯಲ್ಲಿದ್ದ ಬೋಂಡಾ ಕಣ್ಣಿಗೆ ಬಿತ್ತು. ಸಧ್ಯ ಅಂತ ಅವರ ತಟ್ಟೆಗೆ ಬೋಂಡಾ ಹಾಕಿದೆ. ಗರಿ ಗರಿಯಾದ ಬೋಂಡಾನ ಇನ್ನೊಂದಿಷ್ಟು ಹಾಕಿಕೊಂಡು ರಾಜು ಮಾವ ಊಟ ಮುಗಿಸಿದರು. ಊಟ ಮುಗಿಸಿ ಮನೆಗೆ ಬಂದೆವು:

"ಅಲ್ಲಾ. ರಾಜು ಮಾವ ಸ್ಟ್ರಿಕ್ಟ್ ವೆಜಿಟೇರಿಯನ್ ಅಂತ ನಿಂಗೆ ಗೊತ್ತಿಲ್ವೆ. ಆದ್ಯಾಕವರಿಗೆ ಆ ಮೀನಿನ ಬೋಂಡಾನ ತಿನ್ನಿಸಿದೆ. ಅವರು ಅದನ್ನ ಮುಗಿಸುತ್ತಿರು

ವಾಗ ನಾನು ನೋಡಿದೆ. ಎಲ್ಲಾ ಆದ ಮೇಲೆ, "ಇನ್ನೇನು ಅಂತ ಸುಮ್ಮನಿದ್ದೆ" ಎಂದ್ರು ಇವರು.

ನನಗೆ ಬಲು ಮುಜುಗರವಾಯ್ತು. ಬಾಳೆಕಾಯಿ ಬೋಂಡದ ಹಾಗಿದ್ದ ಅದು ಮೀನಿಂದು ಅಂತ ಹ್ಯಾಗ್ ಗೊತ್ತಾಗಬೇಕು? ಜೊತೆಗೆ ಅದನ್ನ ತಪ್ಪಾಗಿ ಯಾರೋ ವೆಜಿಟೇರಿಯನ್ ಟೇಬಲ್ ಮೇಲೆ ಇಟ್ಟಿರಬೇಕು. ರಾಜು ಮಾವನಿಗೆ ಅದನ್ನ ಹೇಳದಿದ್ದರೂ ನನ್ನ 'ಗಿಲ್ಟ್ ಕಾಂಪ್ಲೆಕ್ಸ್' ಹೋಗಲಿಲ್ಲ!

ಇದಾದ ಕೆಲವು ತಿಂಗಳ ನಂತರ ನಮ್ಮ ದೊಡ್ಡತ್ತೆ ನಮ್ಮ ಮನೆಗೆ ಬಂದರು, ಒಂದು ತಿಂಗಳು ನಮ್ಮ ಜೊತೆ ಕಳೆಯಲು. ದೊಡ್ಡತ್ತೆ ತುಂಬ ಮಡಿವಂತರು ಪೂಜೆ ಪುನಸ್ಕಾರ ಜಾಸ್ತಿ. ನಮ್ಮ ಮನೆಯಲ್ಲೊ ಎಲ್ಲಾ ಏಕಾಮುಂಜಲ· ಹಾಗಾಗಿ, ಅವರಿಗೆ ಒಂದು ಕೋಣೆ ಬಿಟ್ಟುಕೊಟ್ಟು, ಅಲ್ಲೇ ಅವರ ಜಪತಪಗಳಿಗೆ ಅನುಕೂಲ ಮಾಡಿ ಕೊಡಲು ಯೋಚಿಸಿದೆ.

ನಾವು ಈ ಮನೆಗೆ ಬಾಡಿಗೆಗೆ ಬರುವುದಕ್ಕೆ ಮುಂಚೆ, ಯಾರೊ ಅಮೇರಿಕನ್ನರು ಇದ್ದರಂತೆ. ಅವರ ಒಂದು ಚಿಕ್ಕ ಮರದ ಪೆಟಾರಿ ಇನ್ನೂ ಇಲ್ಲೇ ಉಳಿದಿತ್ತು. ಆದಷ್ಟು ಬೇಗ ಅದನ್ನು ಅವರು ತೆಗೆದುಕೊಂಡು ಹೋಗುತ್ತಾರೆ ಅಂದಿದ್ದರು ಮನೆಯ ಮಾಲೀಕರು. ದೊಡ್ಡತ್ತೆಯನ್ನು ಇಳಿಸಿದ ರೂಮಿನಲ್ಲೆ ಇತ್ತು ಈ ಪೆಟ್ಟಿಗೆ. "ನಿಮ್ಮ ಮಡಿ ಸಾಮಾನುಗಳನ್ನ ಈ ಪೆಟಾರಿಯ ಮೇಲೆ ಇಟ್ಟುಕೊಳ್ಳಿ, ಹುಡುಗರು ಮಕ್ಕಳ ಕೈಗೆ ಸಿಗದ ಹಾಗೆ" ಎಂದೆ. 'ಸರಿ' ಅಂತ ಹಾಗೇ ಮಾಡಿದರು ದೊಡ್ಡತ್ತೆ.

ಒಂದು ವಾರದ ನಂತರ ಹಿಂದೆ ಬಾಡಿಗೆಗೆ ಇದ್ದ ಅಮೇರಿಕನ್ ಮಹಿಳೆ ಮನೆಗೆ ಬಂದಳು. ಪೆಟಾರಿಯನ್ನು ಇಟ್ಟುಕೊಂಡಿರುವುದಕ್ಕೆ ಅನಂತ ವಂದನೆಗಳನ್ನು ಸಲ್ಲಿಸಿದಳು. ನಂತರ "ನಿಮಗೆ ತೊಂದರೆಯಾಗದಿದ್ದರೆ ಪೆಟ್ಟಿಗೆಯನ್ನು ಮುಂದಿನ ತಿಂಗಳು ತೆಗೆದುಕೊಂಡು ಹೋಗಲು ಅರೇಂಜ್ ಮಾಡ್ತೀನಿ. ಆದರೆ ಅದರೊಳಗಿರುವ ನನ್ನ ಗಂಡನ Ashes ನ್ನು ಮಾತ್ರ ಇವತ್ತು ತೆಗೆದುಕೊಂಡು ಹೋಗಬಹುದೇ ?" ಎಂದಳು.

ನನಗೆ ಎದೆ 'ಜಗ್' ಅಂತು. ಅಲ್ಲಾ, ಇವಳ ಗಂಡನ ಭಸ್ಮ ಈ ಪೆಟಾರಿಯಲ್ಲಿ ಕೂತಿದೆ ಅಂತ ಯಾರು ಕನಸು ಕಾಣಬೇಕು.? ದೊಡ್ಡತ್ತೆಯ ಪೂಜೆ ಸಾಮಾನೆಲ್ಲಾ ಮಡೀಯಾಗಿ ಅದರ ಮೇಲಿದೆ ! ಇದರಲ್ಲಿ ನನ್ನ ತಪ್ಪು ಏನೂ ಇಲ್ಲಾ, ಅಲ್ಲವೇ ? ಎಲ್ಲಾ ಗ್ರಹಗಳ ಚೆಲ್ಲಾಟ !

15

ಕೆಲವು ದಿನಗಳ ಹಿಂದೆ ಗೆಳತಿ ಮೀನಾಕ್ಷಿ ಮನೆಗೆ ಬಂದಳು. ಮೀನಾಕ್ಷಿ ಲೋಕೋಪಕಾರಿ. ನಮ್ಮಂಥ ನಾರ್ಮಲ್ ಮನುಷ್ಯರಿಗೆ ಅವಳನ್ನು ಅರ್ಥ ಮಾಡಿ ಕೊಳ್ಳುವುದೇ ಕಷ್ಟ. ಅವಳಿಗೆ ಯಾವು ಯಾವುದಕ್ಕೊ ಸಂತೋಷವಾಗಿ ಬಿಡುತ್ತದೆ.

"ಬೆಂಗಳೂರಿಗೆ ಗುರುಗಳು ಬಂದಿದ್ದಾರೆ. ನಮ್ಮ ಬಡಾವಣೆಯಲ್ಲೇ, ಅದರಲ್ಲೂ ನಮ್ಮ ಸಮಾಜದಲ್ಲೇ ಜಾಗ ಕೊಟ್ಟರೆ, ಅಲ್ಲೇ ಯಾಗ ಮಾಡಲು ಒಪ್ಪಿದ್ದಾರೆ. ನಮ್ಮ ಪುಣ್ಯ ಅಲ್ವಾ" ಎಂದಳು ಹಿಗ್ಗಿನಿಂದ, ಏನೂ ಹೇಳಲು ತೋಚದೆ 'ಹೂಂ' ಎಂದೆ.

"ಸಮಾಜದ ಸದಸ್ಯೆಯರಿಗೆಲ್ಲಾ ಒಂದೊಂದು ಕೆಲಸ ಹೇಳಿದೀನಿ. ಗುರುಗಳಿಗೆ ನೇಮ ನಿಷ್ಠೆ ಜಾಸ್ತಿ. ಅಲ್ಲಿ ನೇಮವಾಗಿ ಆಗಬೇಕಾದ ಕಾರ್ಯಗಳನ್ನೆಲ್ಲಾ ನೋಡಿ ಕೊಳ್ಳುವ ಜವಾಬ್ದಾರಿ ನಿಂದು" ಅಂದಳು.

"ಅಮ್ಮಾ, ಮೀನಾಕ್ಷಿ, ಸರಿಯಾದ ಆಸಾಮಿನ ಹುಡುಕಿದಿ. ನಂದು 'ನೇಮ ಘಾತಕಿ' ಜಾತಕ. ಇಂತಹ ಕೆಲಸಗಳಿಗೆ ಕೈ ಹಾಕಿದರೆ, ಏನಾದರೂ ಎಡವಟ್ಟು ಮಾಡಲು ಗ್ರಹಗಳು ನನ್ನ ಹಿಂದೆಯೇ ಕಾದು ನಿಂತಿವೆ. ಇನ್ನೇನಾದರೂ ಮೈಲಿಗೆ ಕೆಲಸ ಇದ್ದರೆ ಕೊಡು. ಧಾರಾಳವಾಗಿ 'ಮಾಡ್ತೀನಿ" ಎಂದೆ.

ಕುಚೇಷ್ಟೆ, ಕುಚೋದ್ಯ ಪ್ರವೃತ್ತಿಗಳು ಕೇವಲ ಮನುಷ್ಯನಿಗೆ ಮೀಸಲಾಗಿಲ್ಲ, ಗ್ರಹಗಳಿಗೂ ಅದರ ರುಚಿ ಹತ್ತಿದೆ ಎನ್ನುವುದು ನನ್ನ ಅನಿಸಿಕೆ !

—೦—

ಹಣಗಳಿಸಲು ಪ್ರಯತ್ನಿಸಿ ಆರೋಗ್ಯ ಕೆಡೆಸಿಕೊಂಡ ಅನೇಕರು,
ಆರೋಗ್ಯವನ್ನು ತಿರುಗಿ ಪಡೆಯಲು ಅದೇ ಹಣವನ್ನು ಕೆಡಿಸುತ್ತಿರುವರಂತೆ.

—ಧಳಕು–ತುಣುಕು


ನಂ ಕ್ಲಬ್ಬಿನಲ್ಲಿ

—ಆನಂದ್

ಬುಧವಾರ ಸಂಜೆ ಕ್ಲಬ್ಬಿನಲ್ಲಿ ನಾಗರಾಜು ಸಿಕ್ಕಿದ. ಏನೋ ಗುರು, ಗುಂ ಅಂತ ಕೂತಿದೀಯ ಅಂದೆ. ನಿನ್ ಕುದುರೆ ಕೊನೇಗೆ ನಡೀತಾ ಬಂತೇನು, ಅಂತ ಸೇರಿಸಿದೆ. ಇಲ್ಲ ಕಣೋ, ಕೂತ್ಕೋ, ಹೇಳ್ತೀನಿ ಅಂತ ಈ ಕತೆ ಹೇಳಿದ.

ಮೊನ್ನೆ ಸಂಜೆ ಬ್ರಿಗೇಡ್ ರೋಡ್ ಹತ್ರ ಕಾರಲ್ಲಿ ಹೋಗ್ತಿದ್ದೆ. ಕೆಂಪು ದೀಪ ಇದ್ರೂ, ಯಾರೂ ಇಲ್ಲ ಅಂತ ಮುನ್ನುಗ್ಗಿದೆ. ಹಿಡಿದಾ ಒಬ್ಬ ಟ್ರಾಫಿಕ್ ಪೋಲೀಸ್‌ನೋನು. ಟಿಕೆಟ್ ಬರೆಯುಕ್ಕೆ ಶುರು ಮಾಡಿದ. ಇರಲಿ, ನನ್ ಯತ್ನ ಮಾಡೇ ಬಿಡೋಣ ಅಂತ ಗಂಭೀರವಾಗಿ 'ನೋಡ್ರೀ, ನಂ ಚಿಕ್ಕಪ್ಪ ನಿಂ ಇಲಾಖೇಲೇ ಹಿರೀ ಅಧಿಕಾರಿಗಳು' ಅಂದೆ. ತಕ್ಷಣ ಆ ಆಫೀಸರ್ ಮುಖ ಬದಲಾಯಿತು. ಹೌದೇ ಸಾರ್ ಅಂದ. ನಾನು ಕೆಲಸ ಆಯಿತು ಅಂತ ಕಾರ್ ಸ್ಟಾರ್ಟ್ ಮಾಡಿದ. ಅವನು ಇರೀ ಸಾರ್ ಒಂದು ನಿಮಿಷ ಅಂತ ಟಿಕೆಟ್ ಕೊಟ್ಟೇಬಿಟ್ಟ.! ನಾನು ಹೇಳಿದು ಕೇಳಸ್ತೇನ್ರೀ ಅಂದೆ. ಕೇಳಿಸ್ತು ಸಾರ್, ಆದಕ್ಕೇ ಟಿಕೆಟ್ ಕೊಟ್ಟಿದ್ದು ! ಆ ಅಧಿಕಾರಿಗಳಿಗೆ ಗೊತ್ತಾಗ್ಲೀ ಸಾರ್ ನಾನು ನನ್ನ ಡ್ಯೂಟಿ ಮಾಡ್ತಿದೀನಿ ಅಂತ ಅಂದು, ಒಂದು ತರಹಾ ನಕ್ಕ ! ನಾನು ಕಾರನ್ನ ತಿರುಗಿ ಸ್ಟಾರ್ಟ್ ಮಾಡಿದೆ !

ನಾಗರಾಜು ಅಪೂರ್ವ ಅನುಭವ ಕೇಳಿ ಆ ಪೋಲೀಸ್ನೋನ್ನ ಮನಸ್ಸಿನಲ್ಲೇ ಬೆನ್ನು ತಟ್ಟಿದೆ !



"ಇವತ್ತು ಆಫೀಸ್‌ನಲ್ಲಿ ನಿದ್ದೆ ಮಾಡೋಕ್ಕಾಗ್ಲಿಲ್ವಂತೆ.
ಅದಕ್ಕೆ ಈಗ ಮಲಗಿದ್ದಾರೆ........."

ಪ್ರಹಸನ

ನಪುತ್ರಸ್ಯ ಗತಿರ್ನಾಸ್ತಿ

—ಎಚ್. ಡುಂಡಿರಾಜ್

ಪಾತ್ರಗಳು ಅಪ್ಪಾರಾಯರು, ಕಾಮಾಕ್ಷಿ (ರಾಯರ ಹೆಂಡತಿ), ಪ್ರಯಾಣಿಕ 1, ಪ್ರಯಾಣಿಕ 2, ಕಂಡಕ್ಟರ್, ಮೇಸ್ಟ್ರು, ನರಸಿಂಹ, ನಿರೂಪಕ.

ಒಂದು

(ಸಂದರ್ಭ ಸಿಟಿ ಬಸ್ಸಿನಲ್ಲಿ ಅಪ್ಪಾರಾಯರು ನಿದ್ರಿಸುತ್ತಿದ್ದಾರೆ.)

ಕಂಡಕ್ಟರ್ ಮುಂದೆ ಹೋಗಿ. ಯಾರದು, ಬಿಳಿ ಷರ್ಟು ? ಕಂಬ ಬಿಟ್ಟು ಮುಂದೆ ಹೋಗಿ ಮಾರಾಯಾ? (ವಿಸಿಲ್) ಹಾಳ ಬಾವಿ. ಇಳೀರಿ. ಇಳೀರಿ. ಇಳಿಯೋರಿಗೆ ಜಾಗ ಬಿಡಿ. ಬೇಗ, ಬೇಗ. ಚಿಲ್ರೆ ಇದ್ರೆ ಮಾತ್ರ ಹತ್ತಿ. ಬೇಗ ಇಳೀರಿ ಹಾಳು ಭಾವೀಲಿ ಇಳಿಯೋರು ಇನ್ನಾರಾದ್ರೂ ಇದ್ದೀರೇನ್ರಿ ? ಇಲ್ಲಿ ಬಿಟ್ರೆ ಮುಂದಿನ ಸ್ಟಾಪು "ಸ್ಮಶಾನ". ಯಾರಲ್ಲಿ ? ಬಾಗಿಲಲ್ಲಿ ನೇತಾಡಬೇಡಿ. ರೈಟ್......

ಅಪ್ಪಾರಾಯರು ಹಾಂ! ಹಾಳು ಬಾವಿ ಸ್ಟಾಪ್ ಆಗಿ ಹೋಯ್ತಾ? ಹೋಲ್ಡಾನ್, ಹೋಲ್ಡಾನ್. ಕಂಡಕ್ಟರೇ ನಿಲ್ಲಿಸಿ. ನಾನು ಹಾಳು ಬಾವೀಲಿ. ಇಳೀಬೇಕು.

ಕಂಡಕ್ಟರ್ ಅಲ್ರೀ ! ಇಷ್ಟು ಹೊತ್ತು ಯಾವ ಲೋಕದಲ್ಲಿದ್ರಿ ? ನಾನು ಅ ಪಾಟಿ ಕೂಗಿಕೊಂಡೆ. ನಿಮಗೆ ಖುಷಿ ಬಂದಲ್ಲಿ ನಿಲ್ಲಿಸ್ಲಿಕ್ಕೆ ಆಗೋದಿಲ್ಲ. ಬೇಕಾದರೆ ಸ್ಮಶಾನದಲ್ಲಿಳಿದುಕೊಂಡು ನಡ ಕೊಂಡು ಹೋಗಿ. ಇನ್ಯಾರಿಗ್ರೀ ಟಿಕೇಟು ಬಾಕಿ ?

ರಾಯರು : ಛೇ ಛೇ......ಎಂಥಾ ಕೆಲಸ ಆಗೋಯ್ತು. ಸ್ವಾಮಿ ದಯ ಿಟ್ಟು ಓ ಹಿ ಸ್ವಲ್ಪ ನಿಲ್ಲಿಸಿ.

ಕಂಡಕ್ಟರ್ ನಿಮ್ಮದೊಳ್ಳೆ ಗ್ರಹಚಾರ ಆಯ್ತಲ್ರೀ (ವಿಸಿಲ್) ಬೇಗ ಇಳೀರಿ. ಬೇಗ. ರೈಟ್

ಪ್ರಯಾಣಿಕ 1 ಹೂಂ. ನೋಡಿದ್ರಾ ? ಇನ್ಮೇಲೆ ಬಸ್ನಲ್ಲಿ ಕೂತು ನಿದ್ದೆ ಮಾಡೋರನ್ನ ಎಬ್ಬಿಸ್ಲಿಕ್ಕೆ ಒಬ್ಬರು ಕಂಡಕ್ಟರನ್ನು ಇಡಬೇಕು. ಏನಂತೀರಿ ?

ಪ್ರಯಾಣಿಕ 2 ಅಯ್ಯೋ ಸ್ವಾಮಿ. ಆ ಅಪ್ಪಾರಾಯರ ಕತೆ ನಿಮಗ್ಗೊತ್ತಿಲ್ಲ. ಪಾಪ, ಬಸ್‌ನಲ್ಲಿ ನಿದ್ದೆ ಮಾಡದೆ ಇನ್ನೇನು ಮಾಡ್ತಾರೆ ? ಮನೇಲಂತೂ ಕಣ್ಣು ಮುಚ್ಚಲಿಕ್ಕೆ ಆಗೋದಿಲ್ಲ. ಅಂಥದ್ರಲ್ಲಿ ಬಸ್‌ನಲ್ಲಿ ನಿದ್ದೆ ಬಂದರೆ ಏನೂ ಆಶ್ಚರ್ಯ ಇಲ್ಲ ಬಿಡಿ.

ಪ್ರಯಾಣಿಕ 1 ಅಲ್ರೀ, ರಾಯರು ಸರಕಾರಿ ಆಫೀಸ್ನಲ್ಲಿ ನೌಕರಿ ಮಾಡ್ತಾರಲ್ವಾ?

ಪ್ರಯಾಣಿಕ 2 ಹೌದು.

ಪ್ರಯಾಣಿಕ 1 ಹಾಗಂದ ಮೇಲೆ, ಮತ್ತೆ ಮನೇಲಿ, ಬಸ್‌ನಲ್ಲಿ ಯಾಕೆ ನಿದ್ದೆ ಮಾಡಬೇಕು ? ಆಫೀಸ್ನಲ್ಲಿ ಅಷ್ಟೊಳ್ಳೆ ಕುರ್ಚಿ, ಮೇಜು, ಸೀಲಿಂಗ್ ಫ್ಯಾನು ಎಲ್ಲಾ ಯಾಕೆ ಇಡ್ತಾರಂತೀರಿ ? ಮನೇಲಿ ನಿದ್ದೆ ಮಾಡಲಿಕ್ಕಾಗದ ನಮ್ಮ ರಾಯರಂಥವರು ಆರಾಮವಾಗಿ ನಿದ್ದೆ ಮಾಡಲಿ ಅಂತ. ನಿದ್ದೆ ಮಾಡ್ತಾ ಸ್ಟಾಪ್ ಬಂದಾಗ ಇಳೀದೆ, ಕಂಡಕ್ಟರಿಗೆ, ಸಾರ್ವಜನಿಕರಿಗೆ ಅನವಶ್ಯಕ ಯಾಕೆ ತೊಂದರೆ ಕೊಡಬೇಕು ? ಏನಂತೀರಿ ?

ಪ್ರಯಾಣಿಕ 2 ಏನಿಲ್ಲಾ...ನಿಮ್ಮ ಸ್ಟಾಪ್ ಪಾಸ್ ಆಗಿ ಹೋಯ್ತು ಅಂತೀನಿ.

ಪ್ರಯಾಣಿಕ 1 ಹಾಂ ಅಯ್ಯಯೋ ! ಕಂಡಕ್ಟರೆ, ಹೋಲ್ಡಾನ್, ಹೋಲ್ಡಾನ್. ನಿಲ್ಸಿ.

ಪ್ರಯಾಣಿಕ 2 ಹ್ಹ ಹ್ಹ ಹ್ಹ.

ಮ್ಯೂಸಿಕ್

ನಿರೂಪಕ : ನಮಸ್ಕಾರ. ಶ್ರೋತೃ ಸಮುದಾಯಕ್ಕೆ ಶರಣು ಶರಣಾರ್ಥಿಗಳು! ನಾನು ಈ ಪ್ರಹಸನದ ನಿರೂಪಕ, ಅಂದರೆ ನಾಟಕದ ಸೂತ್ರಧಾರ

ಇದ್ದ ಹಾಗೆ ಅಂತಿಟ್ಕೊಳ್ಳಿ. ಆತನ ಹಾಗೆ ನನ್ನ ಆಯುಧವೂ ಗರಗಸವೇ. ಆದರೆ ಸಣ್ಣ ವ್ಯತ್ಯಾಸ. ಸೂತ್ರಧಾರ ಅಂದರೆ ಸಾಮಾನ್ಯವಾಗಿ ನಾಟಕದ ಶುರುವಿನಲ್ಲೇ ಬಂದು ಕೊರೆಯುವವ ಎಂದರ್ಥ. ಆದರೆ ನಾನು ಅಂದರೆ ನಿರೂಪಕ ಶುರುವಿನಲ್ಲಿ ಬಂದು ಕೊರೆಯುವುದಿಲ್ಲ. ನಡು ನಡುವೆ ಬಂದು ಕೊರೀತೀನಿ ಅಷ್ಟೆ. ಈಗ, ಅಂದರೆ ಸ್ವಲ್ಪ ಹೊತ್ತಿನ ಮೊದಲು, ನೀವು ನೋಡಿದಿರಲ್ಲ. ಕ್ಷಮಿಸಿ, ಕೇಳಿದಿರಲ್ಲ. ಆ ಬಸ್ಸಿನ ಪ್ರಕರಣದಲ್ಲಿ ನಿದ್ದೆ ಮಾಡ್ತಾ ಇದ್ದ ರಾಯರೇ, ನಮ್ಮ ಇವತ್ತಿನ ಪ್ರಹಸನದ ಹೀರೋ: ಅಪ್ಪಾರಾಯರು. ಮನೆಗೆ ಹೋದರೆ ರಾಯರಿಗ ಪಾಪ, ನಿದ್ದೆ ಮಾಡಲಿಕ್ಕೆ ಸಾಧ್ಯವಾಗದಷ್ಟು ತಾಪತ್ರಯಗಳು. ಇದಕ್ಕೆ ಕಾರಣ ಇನ್ಯಾರೂ ಅಲ್ಲ. ಅವರ ಒಬ್ಬನೇ ಒಬ್ಬ ಮಗ. ಏಕೈಕ ಪುತ್ರರತ್ನ. ಅದು ಹ್ಯಾಗೆ ಅನ್ನೋದನ್ನ ನಾನು ಹೇಳಿದರೆ ಚೆನ್ನಾಗಿರೋಲ್ಲ. ನೀವೇ ತಿಳಿದುಕೋಬೇಕು. ಆದ್ರಿಂದ ಬನ್ನಿ. ಬಸ್ಸಿನಿಂದ ಇಳಿದ ರಾಯರು ಓ ಅಲ್ಲಿ ಹೋಗ್ತಿದ್ದಾರೆ. ಅವರನ್ನ ಮೆತ್ತಗೆ ಹಿಂಬಾಲಿಸೋಣ.

ಮ್ಯೂಸಿಕ್

(ಸಂದರ್ಭ : ರಾಯರು ವೇಗವಾಗಿ ನಡೆಯುತ್ತಿದ್ದಾರೆ. ನರಸಿಂಹ ಅವರನ್ನು ಹಿಂಬಾಲಿಸುತ್ತಿದ್ದಾನೆ.)

ನರಸಿಂಹ — ರೀ ಸ್ವಾಮಿ, ನಿಂತ್ಕೊಳ್ಳೀ. ಓಡಿದರೆ ಕಲ್ಲು ಹೊಡೀಬೇಕಾಗುತ್ತೆ. ನಿಲ್ಲಿ.

ರಾಯರು — ಏನು ? ಕಲ್ಲು ಹೊಡಿಯೋದು ? ಯಾಕೆ ? ನಾನೇನೂ ಭಾಷಣ ಗೀಷಣ ಮಾಡಲಿಲ್ಲವಲ್ಲ ?

ನರಸಿಂಹ — ಅದೆಲ್ಲ ಆಮೇಲೆ ಮಾತಾಡೋಣ. ಮೊದಲು ನೂರು ರೂಪ್ಯಾ ತೆಗೀರಿ. ಹೂಂ.

ರಾಯರು — ನೂರು ರೂಪ್ಯಾ ? ಅಲ್ಲಾ ನೀವ್ಯಾರು, ಏನು ಹೇಳ್ತಿದೀರಿ ಅಂತಲೇ ಗೊತ್ತಾಗ್ತಾ ಇಲ್ವಲ್ಲ ?

ನರಸಿಂಹ — ಏನ್ರೀ ? ನನ್ನ ಹತ್ರಾನೇ ನಾಟಕ ಆಡ್ತೀರ ? ನಾನು ಫಿಲ್ಮ್ ಸ್ಟಾರ್ ಕಣ್ರೀ. "ಖಳನಾಯಕ" ಸಿನೆಮಾದ ಮುಂದೆ ನಿಮ್ಮ ನಾಟಕ

ನಡೆಯೋದಿಲ್ಲ. ನನ್ನಿಂದ ತಪ್ಪಿಸ್ಕೋಬೇಕು ಅಂತ ಬೇರೇ ಸ್ಟ್ರಾಪ್‌ನಲ್ಲಿ ಇಳ್ಕೊಂಡು ಅಡ್ಡದಾರೀಲಿ ಓಡಿ ಹೋಗ್ತಾ ಇದೀರಾ ?

ರಾಯರು : ಅಯ್ಯಯ್ಯೋ ಹಾಗಲ್ಲ ಸ್ವಾಮಿ. ನನಗೆ......ಸ್ಟಾಪ್ ಮಿಸ್ ಆಗಿ...

ನರಸಿಂಹ : ಹಾಗಲಕಾಯೀನೂ ಇಲ್ಲ. ಪಡವಲಕಾಯೀನೂ ಇಲ್ಲ. ಎಲ್ಲಿ ಅವಿತುಕೊಂಡರೂ ನನ್ನಿಂದ ತಪ್ಪಿಸ್ಕೊಳ್ಳಿಕ್ಕೆ ಸಾಧ್ಯ ಇಲ್ಲ. ನನ್ನ ಹೆಸ್ರು ನರಸಿಂಹಾರೀ, ನರಸಿಂಹ. ಅರಮನೆ. ಕಂಬದಲ್ಲೂ ಇರಬಲ್ಲೆ. ಪಾಯಿಖಾನೆ ಗೋಡೆಯಿಂದಲೂ ಬರಬಲ್ಲೆ. ಹೂಂ.

ರಾಯರು : ಆಯ್ತು ಸ್ವಾಮಿ. ಒಪ್ಕೊತೀನಿ. ತಾವು ಸಾಕ್ಷಾತ್ ಉಗ್ರ ನರಸಿಂಹನ ಹಾಗೇ ಇದ್ದೀರಿ. ಆದರೆ, ಈ ಬಡಪಾಯಿ ಕುರಿಮರಿಯಿಂದ ಯಾವ ಅಪರಾಧ ಆಯ್ತು ಅನ್ನೋದನ್ನ ದಯಮಾಡಿ ತಿಳಿಸಬೇಕು.

ನರಸಿಂಹ : ಹೋಗಲಿ. ಏನೋ ಬೇಡಿಕೊಳ್ತಾ ಇದೀರಲ್ಲ ಅಂತ ಹೇಳ್ತೀನಿ. ನೀವು ಆ ಹುಡುಗನ ತಂದೆ ಅಲ್ಲವಾ ?

ರಾಯರು : ಯಾವ ಹುಡುಗ ಸ್ವಾಮಿ ? ಅಧಿಕೃತವಾಗಿ ನನಗಿರೋನು ಒಬ್ಬನೇ ಹುಡುಗ.

ನರಸಿಂಹ : ಅವನೇರೀ. ನಮ್ಮ ಮನೆ ಎದುರಿನ ರಸ್ತೇಲಿ ಕ್ರಿಕೆಟ್ ಆಡ್ತಾನಲ್ಲ.

ರಾಯರು : ಹೌದು.

ನರಸಿಂಹ : ಸಿಕ್ಸರ್ ಎತ್ತೋದ್ರಲ್ಲಿ ಎಕ್ಸ್‌ಪರ್ಟ್ ಅಂತ ಕಾಣುತ್ತೆ. ಅಲ್ವಾ ?

ರಾಯರು : ಅಯ್ಯೋ ! ಏನ್ ಹೇಳ್ತೀರಿ ಸಾರ್. ಬೇರೆ ವಿಷಯದಲ್ಲಿ ಕೂಳು ದಂಡ ಆದರೂ ಆಟದಲ್ಲಿ ಮಾತ್ರ ನನ್ನ ಮಗ ಪ್ರಚಂಡ. ಬೀಸಿದಾ ಅಂತಂದ್ರೆ ಬೌಂಡರಿ ಆಚೆಗೆ ಹೋಯ್ತು ಅಂತಲೇ ಲೆಕ್ಕ.

ನರಸಿಂಹ : ಹೌದೌದು. ಹೋಗೋದು ಚೆಂಡಲ್ಲ, ಬ್ಯಾಟು. ನಿಮ್ಮ ಮಗನಿಗೆ ಕ್ರಿಕೆಟ್ ಆಟ. ನಮಗೆಲ್ಲಾ ಪ್ರಾಣ ಸಂಕಟ. ನನ್ನ ಮನೆಗೆ ಬಂದು ನೋಡಿ ನಿಮ್ಮ ಮಗನ ಸಿಕ್ಸರ್‌ನಿಂದಾಗಿ ನಮ್ಮ ಕಿಟಕಿ ಗಾಜುಗಳೆಲ್ಲ ಹೇಗೆ ಪುಡಿಪುಡಿಯಾಗಿವೆ ಅಂತ ತೋರಿಸ್ತೀನಿ. ಬರ್ರೀ.

ರಾಯರು : ಬೇಡ ಸ್ವಾಮಿ, ನೀವು ಹೇಳಿದರೆ ಅದನ್ನ ನಂಬ್ತೀನಿ. ನಿಮ್ಮ ಮೇಲೆ ಹಿ ಹಿ ಅಷ್ಟು ವಿಶ್ವಾಸ ನನಗೆ, ಆದರೆ ಆ ಪುಂಡ ವನ್ಮಗನ ತಪ್ಪಿಗೆ ನನಗೆ ದಂಡ ಹಾಕೋದಾ......?

ನರಸಿಂಹ : ನಿಮಗಲ್ಲದೆ ಇನ್ಯಾರಿಗೆ ಹಾಕೋದ್ರೀ ? ನಿಮ್ಮ ಮಗ ಅಲ್ಲವೇನ್ರಿ ಅವನು ?

ರಾಯರು : ಹಾಗೆ ಹೇಳ್ಕೊಳ್ಳಿಕ್ಕೇ ನಾಚಿಕೆ ಆಗುತ್ತೆ ಸ್ವಾಮಿ. ಇದೊಂದು ಸಾರಿ ದೊಡ್ಡ ಮನಸು ಮಾಡಿ ಆ ಅಯೋಗ್ಯ ನನ್ ಮಗ ಮಾಡಿದ ತಪ್ಪನ್ನು ದಯವಿಟ್ಟು ಹೊಟ್ಟೇಲಿ ಹಾಕ್ಕೊಳ್ಬೇಕು.

ನರಸಿಂಹ : ಆಹಾ ! ಚೆನ್ನಾಗಿ ಹೇಳ್ತೀರ್ರಿ. ಹೊಟ್ಟೇಲಿ ಹಾಕ್ಕೊಬೇಕಂತೆ. ಅಲ್ರೀ. ಅವನು ಮಾಡಿದ ತಪ್ಪು ಅಂದರೆ ಕಿಟಕಿ ಗಾಜು ಒಡೆದಿರೋದು. ಅದನ್ನ ನಾನು ಹೊಟ್ಟೇಲಿ ಹಾಕ್ಕೊಂಡು ಆಸ್ಪತ್ರೆಗ ಹೋಗಬೇಕು ಅಂತ ಹೇಳ್ತೀರಾ? ಆದೆಲ್ಲಾ ಸಾಧ್ಯವಿಲ್ಲ. ಮರ್ಯಾದೆಯಿಂದ ನೂರು ರೂಪ್ಾಯ ತೆಗೀರಿ. ಹೂಂ. ಇಲ್ದಿದ್ರೆ, ಒಂದು ಇಂಗ್ಲಿಷ್ ಗಾದೆ ಇದೆ ಗೊತ್ತಲ್ಲಾ — ದೋಸ್ ಹೂ ಲಿವ್ ಇನ್ ಗ್ಲಾಸ್ ಹೌಸಸ್—ನಿಂ ಮನೆ ಕಿಟಕಿಗೂ ಗಾಜು ಇದೆ. ನೆನಪಿರಲಿ !

ರಾಯರು : ನೂರು ರೂಪ್ಾಯ ! ಭಾಳ ಜಾಸ್ತಿಯಾಯ್ತು ಸ್ವಾಮಿ. ಬಡವನ ಮೇಲೆ ಕರುಣೆ ಇಟ್ಟು ಸ್ವಲ್ಪ ರಿಯಾಯಿತಿ ತೋರಿಸಿ.

ನರಸಿಂಹ : ಏನ್ರೀ ? ರಿಯಾಯಿತಿ ಮಾಡಲಿಕ್ಕೆ ಇದೇನು ಯುಗಾದಿ ಬಟ್ಟೆ ಮಾರಾಟ ಅಂದ್ಕೊಂಡಿದೀರಾ ? ಬೇಗ ಹಣ ತೆಗೀರಿ.

ರಾಯರು : ಏನೋ ಸ್ವಾಮಿ. ಈ ಬಡಪಾಯಿ ಹತ್ರ ಇರೋದೇ ಐವತ್ತು. ಅಷ್ಟು ತೆಗೊಳ್ಳಿ. ಹಾಲಲ್ಲಾದ್ರೂ ಹಾಕಿ. ನೀರಲ್ಲಾದ್ರೂ ಹಾಕಿ.

ನರಸಿಂಹ : ನೋಟನ್ನ ಯಾರಾದ್ರೂ ಹಾಲಲ್ಲಿ ನೀರಲ್ಲಿ ಹಾಕ್ತಾರೇನ್ರಿ ? ಜೇಬಲ್ಲೇ ಹಾಕ್ತೀನಿ. ಕೊಡಿ. ಕೊಡಿ. ಹೂಂ, ಇನ್ನೂ ಏನು ಹಲ್ಲು ಗಿಂಜತಾ ನಿಂತಿದೀರಿ ? ನಡೀರಿ ನಡೀರಿ. ಇನ್ನೊಂದ್ಸಾರಿ ಹೀಗೇ ನಾದ್ರೂ ಆದರೆ ನಿಮ್ಮ ಮಗ ಹುಟ್ಟಲಿಲ್ಲ ಅನ್ನಿಸಿ ಬಿಡ್ತೀನಿ. ಹುಶಾರ್.

ರಾಯರು : ಆಯ್ತು ಸ್ವಾಮಿ. (ಸ್ವಗತ) ಹುಟ್ಟಲಿಲ್ಲಾ ಅನ್ನಿಸ್ತಾನಂತೆ. ಇಂಥಾ ಮಗ ಹುಟ್ಟದಿದ್ರೇ ಚೆನ್ನಾಗಿತ್ತು. ಹುಟ್ಟದಿದ್ರೇ ಚೆನ್ನಾಗಿತ್ತು.

ಮ್ಯೂಸಿಕ್

ನಿರೂಪಕ ಶ್ರೋತೃಗಳೇ, ರಾಯರ ಮಾತನ್ನ ನಂಬಬೇಡಿ. ಹುಟ್ಟದಿದ್ರೇ ಚೆನ್ನಾಗಿತ್ತು ಅಂತ ಈಗ ಹೇಳೋದು. ಒಂಥರಾ ಅಭಾವ ವೈರಾಗ್ಯ. ಒಂದಾದೂ ಗಂಡು ಸಂತಾನ—ಒಬ್ಬನಾದರೂ ವಂಶೋದ್ಧಾರಕ–ಬೇಕು ಅಂತ ಕೆಲವು ವರ್ಷಗಳ ಹಿಂದೆ ಇದೇ ಅಪ್ಪಾರಾಯರೇ ರಾತ್ರಿ ಇಡೀ ಜಪ ಮಾಡ್ತಿದ್ದನ್ನು ನಾನು ನೋಡಿದೀನಿ. 'ಮಂತ್ರ ಹೇಳಿದರೆ ಮಾವಿನ ಕಾಯಿ ಉದುರುತ್ತೋ?' ಅಂತ ತಾವು ಕೇಳಬಹುದು. ಆದರ ರಾಯರು ಮಾತ್ರ ಜಪ ಮಾಡಿದ್ದರಿಂದಲೇ ಮಗ ಹುಟ್ಟಿದ್ದು ಅಂತ ದೃಢವಾಗಿ ನಂಬಿದ್ದಾರೆ. ಅದು ಬೇರೆ ವಿಷಯ. ಬಸ್ಸಿನಿಂದ ಇಳಿದು ಮನೆಗೆ ಹೋಗುವಾಗಲೇ ಇಷ್ಟೆಲ್ಲ ಅನಾಹುತ ಆಗಿರುವಾಗ ಮನೆ ಮುಟ್ಟಿದ ಮೇಲೆ ಏನಾಯ್ತು ಅಂತ ತಿಳ್ಕೊಳ್ಳಿಕ್ಕೆ ನಿಮಗೆಲ್ಲ ಕುತೂಹಲ ಇರಬಹುದಲ್ವೆ ? ನಿಮ್ಮ ಕುತೂಹಲಕ್ಕೆ ನಾನ್ಯಾಕೆ ಅಡ್ಡ ಬರಲಿ ? ರಾಯರ ಮನೆಯಲ್ಲಿ ಇಣುಕಿ, ಮುಂದಿನ ಘಟನೆಗಳನ್ನ ನೋಡೇ ಬಿಡೋಣ.

ಮೂರು

(ಸಂದರ್ಭ ರಾಯರು ಜೋರಾಗಿ ಬಾಗಿಲು ಕುಟ್ಟುತ್ತಿದ್ದಾರೆ. ಮಡದಿ ಕಾಮಾಕ್ಷಿ ಬಂದು ಬಾಗಿಲು ತೆಗೆಯುವಳು.)

ರಾಯರು ಏನೇ ಬಾಗಿಲು ತೆಗೀಲಿಕ್ಕೆ ಎಷ್ಟು ಹೊತ್ತು ? ಆವಾಗಿನಿಂದ ಬೆಲ್ ಒತ್ತತಾ ಇದ್ದೀನಿ—ನಿದ್ದೆ ಮಾಡ್ತಾ ಇದೀಯಾ ?

ಕಾಮಾಕ್ಷಿ ಹೊತ್ತಲ್ಲದ ಹೊತ್ತಿನಲ್ಲಿ ನಿದ್ದೆ ಮಾಡಲಿಕ್ಕೆ ಇದು ಆಫೀಸಲ್ಲ, ಮನೆ. ಮಾಡ್ಲಿಕ್ಕೆ ಬೇಕಾದಷ್ಟು ಕೆಲಸ ಇರುತ್ತೆ. ಸುಮ್ನೆ ಗುಂಡಿ ಒತ್ತಿದರೇ ಬೆಲ್ ಆಗೋದಿಲ್ಲ. ಇಲ್ನೋಡಿ ಕಾಲಿಂಗ್ ಬೆಲ್‌ನ ಗುಂಡಿ ಮಾತ್ರ ಇಟ್ಟು, ಬೆಲ್ಲನ್ನು ನಿಮ್ಮ ಮಗ ಆಡೋಕೆ ತಗೊಂಡು ಹೋಗಿದಾನೆ ಗೊತ್ತಾಯ್ತಾ ? ನೋಡದೆ ಮಾಡದೆ ಸುಮ್ನೆ ನನಗೆ ಜೋರು ಮಾಡಬೇಡಿ. ಮನೆಗೆ ಬರುವಾಗಲೇ ಲೇಟು, ಬರ್ತಿದ್ದ ಹಾಗೆ ಶುರುವಾಯ್ತು ಬೈಗುಳ ಸಿಟ್ಟು.

ರಾಯರು : ಯಾರಿಗೇ ಸಿಟ್ಟು ? ನಾನೆಲ್ಲೇ ಸಿಟ್ಟು ಮಾಡಿದೆ ? ಬಾಯಿಗೆ ಬಂದ ಹಾಗೆ ಬೊಗಳ ಬೇಡ, ನಾನು ಸಿಟ್ಟು ಮಾಡ್ತೀನಿ, ಬೈತೀನಿ ಅಂತೆಲ್ಲ ಹೇಳಿದ್ರೆ ಜಾಗ್ರತೆ. ನಿನ್ನ, ನಿನ್ನಾ ಹಾಳಾದ್ದು ನಾಲಗೆಯಲ್ಲಿ ಒಣಗಿ ಹೋಗಿ ಮಾತಾಡ್ಲಿಕ್ಕೇ ಆಗ್ತಾ ಇಲ್ಲ. ಮೊದಲು ಸ್ವಲ್ಪ ಕಾಫಿ ತಾ. 'ಉಸ್' ಸಾಕಾಯ್ತಪ್ಪ. ಲೇ ಎಲ್ಲಿ ಹೋಯ್ತೇ ಇವತ್ತಿಂದು ?

ಕಾಮಾಕ್ಷಿ : (ಒಳಗಿನಿಂದ) ಏನು ? ಇವತ್ತಿಂದು ? ಓಹೋ ಇವತ್ತು ನಮ್ಮ ಹುಡುಗನ ಮೇಲೆ ಬಂದಿರೋ ಕಂಪ್ಲೈಂಟ್ ಲಿಸ್ಟಾ ? ಈಗ ತರ್ತೀನಿ.

ರಾ : ಅಯ್ಯೋ ಬೇಡ ಮಾರಾಯ್ತಿ. ನಾನು ಕೇಳಿದ್ದು ಅದಲ್ಲ. ಇವತ್ತಿನ ಪೇಪರು.

ಕಾ : ಅಲ್ಲೇ ಎಲ್ಲೋ ಇರ್ಬೇಕು. ಮೊದಲು ಕಾಫಿ ತಗೊಳ್ಳಿ. ಆಮೇಲೆ ತಣ್ಣಗಾಯ್ತು ಅಂತ ಗಲಾಟೆ ಮಾಡೋದು ಬೇಡ.

(ಬಾಗಿಲು ಬಡಿದ ಶಬ್ದ.)

ಮೇಸ್ಟರು : ಬಾಲಕೃಷ್ಣನ ಮನೆ ಇದೇ ಏನ್ರಿ ?

ರಾಯರು : ಇನ್ನೇನು ಗ್ರಹಚಾರ ಬಂತಪ್ಪಾ ? (ಬಾಗಿಲು ತೆಗೆದು) ಯಾರು ನೀವು ? ಏನ್ಬೇಕಾಗಿತ್ತು ?

ಮೇಸ್ಟರು : ಬಾಲಕೃಷ್ಣನ ಮನೆ ಬೇಕಾಗಿತ್ತು. ಇದೇ ಮನೇನಾ ?

ರಾಯರು : ಅಲ್ಲ.

ಮೇಸ್ಟರು : ಮತ್ತೆ ಇದು ?

ರಾಯರು : ಅವನ ಅಪ್ಪನ ಮನೆ. ಈ ಮನೆ ಯಜಮಾನ ನಾನ್ರೀ, ಬಾಲಕೃಷ್ಣ ಅಲ್ಲ.

ಮೇಸ್ಟರು : ಓಹೋ ! ಹೀಗೋ ? ಅಂದರೆ ನೀವು ಬಾಲಕೃಷ್ಣನ ತಂದೆ ಅಂದ ಹಾಗಾಯು

ರಾಯರು : ಉಹುಂ. ಹಾಗಲ್ಲ. ಬಾಲಕೃಷ್ಣ ನನ್ನ ಮಗ. ನಾನು ಐ. ಅಪ್ಪಾ ರಾವ್, ಬಿ. ಎ.

ಮೇಸ್ಟರು : ಓಹೋ ನಿಮ್ಮ ಹೆಸರು ಅಯ್ಯಪ್ಪ ರಾವ್ ಅಂತಲೋ? ಹಾಗಾದರೆ ನೀವು ಕೇರಳದವರು ಅಂದಾಗಾಯ್ತು.

ರಾಯರು : ಅಯ್ಯಪ್ಪ ಅಲ್ರೀ. ಐ. ಅಪ್ಪಾರಾವ್, ಐ ನನ್ನ ಇನಿಷಿಯಲ್. "ಅಯ್ಯನೂರು ಅಪ್ಪಾರಾವ್, ಬ್ಯಾಚಲರ್ ಆಫ್ ಆರ್ಟ್ಸ್" ಅಂದರೆ ನಾನು ಅಂತ ಇಡೀ ಊರಿಗೆಲ್ಲ ಗೊತ್ತಿದೆ. ಬೇಕಾದರೆ ವಿಚಾರಿಸಿ ನೋಡಿ. ಆ ನನ್ಮಗನ ತಂದೆ ಅಂತ ಪರಿಚಯ ಮಾಡ್ಕೊಳ್ಳೋ ಅಗತ್ಯವಿಲ್ಲ ತಿಳೀತಾ ?

ಮೇಸ್ಟರು : ಪರವಾಗಿಲ್ಲ ಬಿಡಿ. ಯಾರಾದರೇನು ? ಒಟ್ನಾರೆ ನನಗೆ ಆ ಬಾಲಕೃಷ್ಣನ ತಂದೇನ ನೋಡ್ಬೇಕಾಗಿತ್ತು. ನಾನು ಅವನ ಶಾಲೆ ಮೇಸ್ಟ್ರು.

ರಾಯರು : ಮೇಸ್ಟ್ರಾ ? ಬನ್ನಿ, ಬನ್ನಿ. ನಮಸ್ಕಾರ. ಕೂತ್ಕೊಳ್ಳಿ. ಲೇ ಇನ್ನೊಂದು ಕಪ್ಪು.

ಮೇಸ್ಟರು : ಬೇಡ. ಬೇಡ. ನೀವೇನೂ ತೊಂದರೆ ತಗೋಬೇಡಿ. ನನಗೆ ಇಲ್ಲಿ ರೋದೆ ಸಾಕು.

ರಾಯರು : ಅದು......ಅದು......ನನಗೇ ಅಂತ.

ಮೇಸ್ಟರು : ನಿಮಗೆ ಅಂತ ಇಟ್ಟಿದ್ದು ತಾನೆ? ಪರವಾಗಿಲ್ಲ ಬಿಡಿ. ಇದನ್ನೇ ಕುಡೀತೀನಿ. ನೀವೇನೂ ತೊಂದರೆ ತಗೋಬೇಡಿ. (ಕುಡಿದು) ಅಂದ ಹಾಗೆ ನಿಮ್ಮ ಮಗ ಬಾಲಕೃಷ್ಣ ಮನೇಲಿ ಇಲ್ಲ ತಾನೆ ?

ಕಾಮಾಕ್ಷಿ : ಹೀಗೆ ಇದ್ದಕ್ಕಿದ್ದ ಹಾಗೆ ಬಂದು ಕೇಳಿದರೆ ಅವನೆಲ್ಲಿ ಸಿಗ್ತಾನೆ ? ಎಲ್ಲೋ ಆಡಲಿಕ್ಕೋ, ತಿರುಗಾಡಲಿಕ್ಕೋ ಹೋಗಿರ್ಬೇಕು.

ರಾಯರು : ನನ್ನ ಮಗ ಅಂದರೆ ಒಂಥರಾ ಮಿನಿ ಸ್ಟಾರ್ ಇದ್ದ ಹಾಗೇ ಸಾರ್. ಮೊದಲೇ ಎಪ್ಯಾಂಟ್‌ಮೆಂಟ್ ತಗೊಂಡು ಬರೋದು ಉತ್ತಮ. ಹಿ, ಹಿ, ಹಿ.

ಮೇಸ್ಟರು : ಒಳ್ಳೇದು. ಒಳ್ಳೇದು. ಅವನು ಮನೇಲಿ ಇಲ್ಲ ಅಂತ ಖಾತ್ರಿ ಮಾಡ್ಕೊಂಡೇ ನಾನಿಲ್ಲಿಗೆ ಬಂದಿರೋದು. ಯಾಕಂದ್ರೆ, ನಾನೂ ಹೆಂಡ್ರು, ಮಕ್ಕಳು ಇರುವವನು. ನಾಳೆ ಏನಾದರೂ ಹೆಚ್ಚು ಕಡಿಮೆ ಆದರೆ ?

ರಾಯರು : ಅಂದರೆ ? ನೀವೇನು ಹೇಳ್ತಿದೀರಿ ಅನ್ನೋದೆ ತಿಳೀತಾ ಇಲ್ವಲ್ಲ.

ಮೇಸ್ಟರು : ಇನ್ನೇನಿಲ್ಲ. ನಿಮ್ಮ ಮಗನ ವಿಷಯ ಸ್ವಲ್ಪ ನಿಮ್ಮ ಹತ್ರ ದೂರು ಹೇಳ್ಬೇಕಾಗಿತ್ತು. ಅವನು ಅಕಾಸ್ಮಾತ್ ಅದನ್ನ ಕೇಳಿಸ್ಕೊಂಡ್ರೆ ನಾಳೆ ಇನ್ನೇನಾದರೂ ತರಲೆ ಮಾಡಿಯಾನು ಅಂತ ಕೊಂಚ ಅನು ಮಾನ ಮಾಡ್ದೆ.

ರಾಯರು : ನೀವೊಳ್ಳೇ ಮೇಸ್ಟ್ರು !

ಮೇಸ್ಟರು : ಹೌದು. ಹೌದು. ಎಲ್ರೂ ನನ್ನ ಒಳ್ಳೇ ಮೇಸ್ಟ್ರು ಅಂತಲೇ ಹೇಳ್ತಾರೆ.

ರಾಯರು : ಹಾಗಲ್ರೀ ನಾನಂ ಹೇಳಿದ್ದು. ಮೇಸ್ಟ್ರೇ. ಈ ಥರಾ ಹುಡುಗ್ರಿಗೆ ಹೆದ್ರಿದ್ರೆ ಅವರನ್ನ ಹತೋಟೀಲಿ ಇಡೋರು ಯಾರು ಅಂತ ?

ಮೇಸ್ಟರು : ಅದೆಲ್ಲಾ ನಿಮ್ಮ ಕಾಲದಲ್ಲಿ ಆಯ್ತು ಸ್ವಾಮಿ. ಈಗ ನಿಮ್ಮ ಬಾಲ ನಂಥ ಹುಡುಗ್ರ ಎದುರು ಸಂಸಾರಸ್ಥನಾದ ಯಾವ ಮೇಸ್ಟ್ರೂ ಬಾಲ ಬಿಚ್ಕೋದಿಲ್ಲ. ಯಾವಾಗ ಏನ್ಮಾಡ್ತಾನೆ ಅಂತ ಹೇಳೋಕಾಗೋ ದಿಲ್ರಿ. ಇವತ್ತು ನನ್ನ ಕುರ್ಚಿ ಕಾಲಡಿ ಹೊನ್ನೆಕಾಯಿ ಇಟ್ಟಿದ್ದ. ನಾನೇನಾದ್ರೂ ನೋಡ್ದ ಕೂತಿದ್ರೆ ಕೈಕಾಲು ಮುರಿದೋಗ್ತಿತ್ತು. ಯಾವ ಮುಹೂರ್ತದಲ್ಲಿ ನೀವು ಅವನಿಗೆ ಬಾಲಕೃಷ್ಣ ಅಂತ ಹೆಸರಿಟ್ಟಿರೋ ಏನೋ, ಸಾಕ್ಷಾತ್ ಕೃಷ್ಣ ಪರಮಾತ್ಮನ ಬಾಲ ಲೀಲೆಗಳನ್ನೆಲ್ಲ ಮಾಡಿ ತೋರಿಸ್ತಾನೆ. ಅದನ್ನೆಲ್ಲ ಹೇಳ್ತಾ ಹೋದರೆ ನಿಮಗೆ ಕಿರಿ ಕಿರಿ ಆಗಬಹುದೇನೋ......

ಕಾಮಾಕ್ಷಿ : ಪರವಾಗಿಲ್ಲ ಬಿಡಿ. ದಿನಾ ಇಂಥ ದೂರುಗಳನ್ನೇ ಕೇಳಿ ಕೇಳಿ ನಮ್ಮಿಬ್ಬರಿಗೂ ರೂಢಿಯಾಗಿ ಹೋಗಿದೆ. ಅಲ್ವೇನ್ರಿ ?

ರಾಯರು : ಆ ಬೇಕೂಫ್. ನನ್ಮಗ ಕೃಷ್ಣನ ಬಾಲ ಲೀಲೆಗಳನ್ನು ಮಾಡ್ತಾನೆ ಅಂದರೆ ಇವಳಿಗೆ ಭಾರೀ ಹೆಮ್ಮೆ. ಅವನು ಬಾಲಕೃಷ್ಣ ಆದರೆ ತಾನು ಯಶೋದಾದೇವಿ ಆಗ್ತೀನೆ ಅಂದ್ಕೊಂಡಿದಾಳೆ ಹುಚ್ಚಿ.

ಮೇಸ್ಟರು : ಅದನ್ನೇ ನಾನೂ ಹೇಳಬೇಕಂತಿರೋದು. ಹೀಗೆ ಬಿಟ್ರೆ ಇನ್ನೊಂದು ದಿನ ಸಾರ್ವಜನಿಕ ಸ್ವಿಮ್ಮಿಂಗ್ ಪೂಲ್‌ನಲ್ಲಿ ನಿಮ್ಮ ಬಾಲಕೃಷ್ಣ ಹೆಣ್ಣು ಮಕ್ಕಳ ಬಟ್ಟೆಬರೆಗಳನ್ನು ಹೊತ್ಕೊಂಡು ಹೋಗ್ತಾನೆ ಅಷ್ಟೆ.

ಅಲ್ಲಿಗ ಕೃಷ್ಣಾವತಾರ ಪೂರ್ತಿ ಆಗುತ್ತೆ ನೋಡಿ. ನಿಮ್ಮ ಒಳ್ಳೇದಕ್ಕೆ ಹೇಳ್ತಾ ಇದೀನಿ. ನಿಮ್ಮ ಬಾಲಕೃಷ್ಣ ಇನ್ನಷ್ಟು ಬಾಲ ಬಿಚ್ಚೋ ಮೊದಲು ನೀವು ಸ್ವಲ್ಪ ಕತ್ತರಿ ಪ್ರಯೋಗ ಮಡೋದು ಸಮಾಜದ ಹಿತದೃಷ್ಟಿಯಿಂದ ಅತ್ಯಗತ್ಯ ಅಂತ ನನ್ನ ಅಭಿಪ್ರಾಯ.

ರಾಯರು : ಏನ್ ಮೇಸ್ಟ್ರೆ ? ನೀವೇ ಹೀಗಂದ್ರೆ ಹೇಗೆ ? ಮನೇಲಿ ಅವನ ಕಾಟ ತಡೀಲಾರದೆ ನಾವು ಅವನ್ನ ಶಾಲೆಗೆ ಕಳಿಸೋದು. ನೀವು ರೂಲ್ಸು, ರೆಗ್ಯುಲೇಶನ್ಸ್ ಅಂತ ಹೇಳಿ ಅವನನ್ನು ಒಂದು ಹಾದಿಗ ತರಬೇಕಪ್ಪ.

ಮೇಸ್ಟರು : ಎಂಥಾ ರೂಲ್ಸು ಮಾರಾಯ್ರೆ ? ಕಾನೂನು ಭಂಗ ಮಾಡೋದ್ರಲ್ಲಿ ನಿಮ್ಮ ಮಗ ಅದ್ವಿತೀಯ. ಹುಲ್ಲಿನ ಮೇಲೆ ನಡೆಯಬಾರದು ಅಂತ ಬರೆದಿದ್ದರೆ ಇವ ಓಡ್ತಾ ಹೋಗ್ತಾನೆ. 'ಇಲ್ಲಿ ಉಗುಳಬಾರದು' ಅಂತ ಬೋರ್ಡ್ ಹಾಕಿದರೆ ಹರ ಹಿಡಿದು ಅಲ್ಲೇ ಉಗುಳುತ್ತಾನೆ. ಯಾಕೆ ಉಗುಳಿದೆ ಅಂತ ಕೇಳಿದರೆ 'ಇಲ್ಲಿ' ಅಂತ ಬರೆದಿದ್ದೀರಿ. ನಾನೇನು ಬೋರ್ಡ್ ಮೇಲ ಉಗುಳಲಿಲ್ವಲ್ಲಾ ಅಂತಾನೆ.

ರಾಯರು : ಅದು ಹೋಗಲಿ. ಪರೀಕ್ಷೇಲಾದರೂ ಸರಿಯಾಗಿ ಬರೀತಾನೋ ?

ಮೇಸ್ಟರು : ತುಂಟಾಟ ಮಾಡಲಿಕ್ಕೆ ಉಪಯೋಗಿಸುವ ಬುದ್ಧೀಲಿ ಹತ್ತನೇ ಒಂದಂಶ ಓದಲಿಕ್ಕೆ ಉಪಯೋಗಿಸಿದ್ದರೆ, ನಿಮ್ಮ ಮಗ ರ್‍ಯಾಂಕ್ ಬರ್‍ತಿದ್ದ. 9ನೇ ಕ್ಲಾಸಲ್ಲಿ ಕೂತ್ಕೊಳ್ಳಿಕ್ಕೆ ಬೆಂಚುಗಳ ಅಭಾವವಿದೆ ಅಂತ ಕಳೆದ ವರ್ಷ ಅವನನ್ನು ಪಾಸು ಮಾಡಿದೀವಿ, ಅಷ್ಟೆ.

ರಾಯರು : ಏನೋ ಮೇಸ್ಟ್ರೆ ! ನೀವೇ ಏನಾದರೂ ಬುದ್ಧಿ ಹೇಳಿ ಅವನನ್ನು ಸರಿ ಮಾಡ್ಬೇಕು. ಆಚಾರ್ಯ ದೇವೋ ಭವ ಅಂತ ನಿಮ್ಮ ಮೇಲೇ ಭಾರ ಹಾಕ್ತೀವಿ.

ಮೇಸ್ಟರು : ಮೇಸ್ಟ್ರು ಮಕ್ಕಳಿಗೆ ಹೇಳಿ ಕೊಡೋ ಕಾಲ ಮುಗಿದ್ ಹೋಯ್ತು ಸ್ವಾಮಿ. ನಾನು ಮೇಸ್ಟ್ರು ಅಂತ ಏನಾದರೂ ಗದರಿಸಲಿಕ್ಕೆ ಹೋದರೆ, ಒಂದೋ ಕ್ಲಾಸು ಮುಗಿದ ಮೇಲೆ ಹುಡುಗರೇ ವಾಪಾಸು ಗದರಿಸ್ತಾರೆ ಇಲ್ಲಾ. ಅವರ ಹೆತ್ತವರು ಬಂದು "ನಮ್ಮ ಮಗೂನ ಬಯ್ಯಲಿಕ್ಕೆ ನೀವ್ಯಾರ್‍ರೀ" ಅಂತ ಕೇಳ್ತಾರೆ. ಅದ್ರಿಂದ ನೀವಿದೀರಿ,

ನಿಮ್ಮ ಮಗ ಇದಾನೆ. ಏನು ಬೇಕಾದರೂ ಮಾಡ್ಕೊಳ್ಳಿ. ಆ ಮೇಲೆ ನಾನು ಹೇಳಲಿಲ್ಲ ಅಂತ ಮಾತ್ರ ದೂರ್ಬೇಡಿ, ಅಷ್ಟೆ. ನನ್ನ ಕರ್ತವ್ಯ ನಾನು ಮಾಡಿದೀನಿ.

ರಾಯರು : ಏನು ? ಹೊರಟುಬಿಟ್ಟಿರಾ ? ಕೂತ್ಕೊಳ್ಳಿ.

ಮೇಷ್ಟರು : ಸ್ವಾಮಿ, ಬರ್ತೀನಿ... ಇನ್ನೂ ನಾಲ್ಕಾರು ಮನೆಗಳಿಗೆ ಹೋಗ್ಬೇಕು. ನಮಸ್ಕಾರ.

ರಾಯರು : ಆಯ್ತು, ನಮಸ್ಕಾರ. (ಬಾಗಿಲು ಹಾಕುವರು.) ಕೇಳಿದ್ಯೇನೆ ನಿನ್ನ ಮಗನ ಗುಣಗಾನ ? ಒಬ್ಬನೇ ಮಗ ಅಂತ ಮುದ್ದು ಮಾಡಿ ಅವನ್ನ ಹಾಳು ಮಾಡಿದ್ದು ನೀನು. ಈಗ ಎಲ್ಲರ ಹತ್ರ ಮಾತು ಕೇಳೋದು ನಾನು. ಮನೇಗೆ ಬರಲಿ ಅವನು ನೋಡ್ಕೊತೀನಿ.

ಕಾಮಾಕ್ಷಿ : ನನ್ನ ಮ್ಯಾಲೆ ಯಾಕ್ರೀ ರೇಗ್ತೀರಿ? ನಾಲ್ಕು ಹೆಣ್ಣು ಮಕ್ಕಳನ್ನು ಹೆತ್ತ ಮೇಲೆ ಸುಸ್ತಾಯ್ತು, ಸಾಕು ಅಂದರೂ ಕೀರ್ತಿಗೊಬ್ಬ ಹುಡುಗ ಬೇಕು, ವಂಶೋದ್ಧಾರಕ ಬೇಕು "ಅಪುತ್ರಸ್ಯ ಗತಿರ್ನಾಸ್ತಿ ಅಂತ ನೀವೇ ಜಪ ಮಾಡ್ತಿದ್ದನ್ನ ಇವ್ತು ಹೀಗ ಮರ್ತು ಬಿಟ್ಟಿರಾ ? (ಮೌನ) ಪೇಪರ್ ಓದೋ ನೆಪ ಮಾಡಿ ಮುಖ ಮುಚ್ಕೊತೀರೇನ್ರಿ? ಮಾತಾಡ್ರೀ.

ರಾಯರು : ಯಾಕೆ ಸುಮ್ಮನೆ ಕಿರುಚಾಡಿ ಗಂಟಲು ನೋಯಿಸ್ಕೊಳ್ತಿ ? ಇಲ್ಲಿ ನೋಡು (ಪೇಪರ್ ತೋರಿಸಿ) ಮಕ್ಕಳಿಂದಾಗಿ ಹೆತ್ತವರ ಮಾನ ಹರಾಜು ಆಗೋದು ಎಲ್ಲಾ ಕಡೆ ಇದ್ದದ್ದೇ. ಮೊದಲನೇ ಪುಟ ದಲ್ಲೇ ಪ್ರಿಂಟಾಗಿದೆ. ಓದ್ತೀನಿ ಕೇಳು. "ಮಾನಭಂಗ ಪ್ರಕರಣ: ಸಚಿವ ಪುತ್ರನ ಬಂಧನ" ಮಂತ್ರಿಗಳಿಗೂ ಮಕ್ಕಳ ಕಾಟ ತಪ್ಪಿದ್ದಲ್ಲ. ಅಂದ್ಮೇಲೆ ನಮ್ಮದೇನು ಮಹಾ ಬಿಡು.

ಕಾಮಾಕ್ಷಿ : ಮಗ ಬೇಕು ಮಗ ಬೇಕು ಅಂತ ಬೊಬ್ಬೆ ಹೊಡೀತಿದ್ರಲ್ಲಾ. ಆಗ ಇದನ್ನೆಲ್ಲಾ ಯೋಚನೆ ಮಾಡ್ಬೇಕಿತ್ತು.

ರಾಯರು : ಮಾಡ್ಲಿಲ್ಲ. ಏನಾಯ್ತೀಗ ? ಮೊದಲು ಹೇಳ್ತಿದ್ದದ್ದನ್ನೇ ಸ್ವಲ್ಪ ಬದಲಾಯಿಸಿ ಹೇಳಿದರಾಯ್ತು. ಅಂದರೆ "ಮಂಗಳಾರತಿಗೊಬ್ಬ ಮಗಳು ಅಪಕೀರ್ತಿಗೊಬ್ಬ ಮಗ" ಅನ್ನೋದು.

ಅಪುತ್ರಸ್ಯ ಗತಿರ್ನಾಸ್ತಿ ಅಂತಿದ್ರಲ್ಲ. ಈಗ

"ಸಪುತ್ರಸ್ಯ ಗತಿರ್ನಾಸ್ತಿ" ಅನ್ನೋದು. ಏನಂತೀಯಾ ?

ಮ್ಯೂಸಿಕ್

ನಿರೂಪಕ ಶ್ರೋತೃಗಳೇ ಪ್ರಹಸನದ ಹೆಸರು ಅದರ 'ಹೀರೋ' ಬಾಯಿಂದಲೇ ಬಂತು ಅಂದ್ಮೇಲೆ ಪ್ರಹಸನ ಮುಗೀತು ಅನ್ನೋದು ನಿಮಗೆಲ್ಲಾ ಗೊತ್ತಾಗಿರ ಬಹುದು. ಆದರೆ ಒಂದು ವಿಚಾರದಲ್ಲಿ ನನಗೆ ಸ್ವಲ್ಪ ಅಸಮಾಧಾನ ಇದೆ. ಪ್ರಹಸನದಲ್ಲಿ ಪಲವಾರು ಪಾತ್ರಗಳು ಬಂದರೂ 'ಈ ಪ್ರಹಸನದ ಮುಖ್ಯ ವಸ್ತು ಅಂದರೆ ನಮ್ಮ ರಾಯರ ಪುತ್ರರತ್ನ ಬಾಲಕೃಷ್ಣನ ಮಾತುಗಳನ್ನು ನಿಮಗೆ ಕೇಳಿಸ್ಲಿಕ್ಕೆ ಆಗಲಿಲ್ಲವಲ್ಲ ಅಂತ. ಏನ್ಮಾಡೋದು ಹೇಳಿ? ಅಪ್ಪ ಅಮ್ಮನ ಕೈಗೆ ಆತ ಸಿಗೋದಿಲ್ಲ. ಇನ್ನು 'ನಾನು ಯಃಕಶ್ಚಿತ್ ನಿರೂಪಕ ಕರೆದರೆ ಅವ ಬರ್‍ತಾನೆಯೇ ? ಆದ್ದರಿಂದ ದಯವಿಟ್ಟು ಕ್ಷಮಿಸಬೇಕು. ಪ್ರಹಸನವನ್ನು ಇಲ್ಲಿಗೇ ಮುಕ್ತಾಯ ಮಾಡ್ತಾ ಇದೀನಿ.

(ಮುಗಿಯಿತು.)

(ಕೃಪೆ ಆಕಾಶವಾಣಿ, ಮಂಗಳೂರು.)



"ನೀ ಇಂಗೇ ಬಿಟ್ರೆ......ಒಲಂಪಿಕ್‌ಗೂ ಓಗ್ಬೋದು !"

ಹನುಮಪ್ಪನ ಹೇಳಿಕೆ—೧

ಕೆಂಡ್ಗಣ್ಸಾಹೇಬ್ರು

ರಾಮಪ್ಪ

ಇವರು ನಮ್ಮಾಫೀಸರ್
ಮಾಫಿ ಮಾಡ್ಬೇಕು ಸರ್—ಯಾರ್ಗೂ ಹೇಳ್ಬೇಡಿ,
ಕಾಫಿ ಸಾರ್, ಅವರ್ಕುಡಿಯೋಗ್ಕಾಫಿ.
ನಾನೇ ಕೊಡ್ತೀನ್ ಬರಸಿ—
ಶೀಸೇನ್ ಚೆನ್ನಾಗ್ ಒರಸಿ—
ವಿಸ್ಕಿ ಅಂತಾರಲ್ಲ,
ಅದ್ನೂನು ಸೋಡಾನು
ಒಸಿ ಒಸಿ ಬೆರಸಿ.
ನಾನೇ ತಂದ್ಕೊಡ್ತೀನಿ
ಪಕ್ಕದ ಅಲ್ಮಾರ್ನಿಂದ.
ಯಾರಾನ ನಿಂತಿರಲಿ ಯಾರಾನ ಕುಂತಿರಲಿ
ನಿಮಿಷ ನಿಮಿಷಕ್ಕೂನು
ಗುಟಕಾಯಿಸ್ತಿರ್ತಾರೆ ;
ಚಪ್ಪರ್‌ಸ್ತಾ ಚಪ್ಪರ್‌ಸ್ತಾ
ಪೈಲ್ನೋಡ್ತಾ ಇರ್ತಾರೆ ;
ಗುಮಾಸ್ತಪ್ಪ ಬಂದಿ
ಪಕ್ದಲ್ಲೆ ನಿಂತ್ಕೊಂಡಿ—
'ಛೋಟಾ ಸೈನ್ ಬಡಾ ಸೈನ್
ಛೋಟಾ ಸೈನ್ ಬಡಾ ಸೈನ್'
ಅಂತ್ಹೇಳ್ತಾ ಇರ್ತಾರೆ—
ಕೆತ್‌ತ್ತಾನೆ ಇರ್ತಾರೆ ಗುದ್ಲಿ ಗುರ್ತು
ಇರಬೇಕಲ್ಲಾ ನಿಮಿಷನಾರಾ ಪುರ್ಸೊತ್ತು.
ಒಳ್ಳೆ ಗರ್ಮೀ ಮೇಲಿರ್ತಾರೆ,
ಆದರ್ಮಾತ್ರ
ನಾಲ್ಗೆ ಹೊಳ್ಯಾಕಿಲ್ಲ

ಮೊತ್ಸಲ್ ಪಿಚ್ ಸಿಕ್ಕಾಕಿಲ್ಲ.
ಕಣ್ಮಾತ್ರ ಕೆಂಡ್ದುಂಡೆ
ಯಾವಾಗ್ಲೂ—ಅದ್ಕೇನೆ.
ಕೆಂಡ್ಗಣ್ ಸಾಹೇಬ್ರು
ಅಂತ ಅವರ್ಗಡ್ಡೆನ್ರು:
ಒಳ್ಳೆ ಮನಸು, ಸಾರ್
ಬಲುವೊಳ್ಳೇ ಮನಸು.
ಬೆನ್ ಹಿಂದೇನೋ ಐತೆ.
    ಗಾಂಧೀ ಫೋಟೋ
ಒಂದೊಂದ್ಸಲ
    ಹಿಂದಿರಗ್ ನೋಡ್ತಾರೆ,
    ತಲೆತಗ್ಗಿಸ್ತಾರೆ.
ಬಲುವೊಳ್ಳೇ ಮನಸು, ಸಾರ್
ಬಲುವೊಳ್ಳೇ ಮನಸು.
ಕನಡಾ ಮಾತ್ರ ಬರಾಕಿಲ್ಲ—
    ಯಾವಾಗ್ಲೂ
    ಟೂಸ್ ಪಸ್ನು ಕಿಸ್‌ಮಿಸ್ನು
ಪರದೇಸೀ ಇಂಗ್ಲೀಸು.
ಕಲೀಬೇಕೂ ಅಂತ ತಾಕೀಗಾಗೈತೆ,
ನಾನೇ ಯೇಳ್ಕೊಡ್ತೀನಿ—
    ಮಾತಾಡೋದನ್ನ.

ಹೇಳಿಕೆ—೨

ಸರ್ಕ್ಯಾರಿ ಕೆಲ್ಸ

ಇನ್ಸ್ಪೆಕ್ಟರ್ ಸಾಹೇಬ್ರಿದ್ರು,
ಅವರಿಚಾರ ಇಷ್ಟೆ—
ಆ ಪಕ್ಕ ಈ ಪಕ್ಕ ಬಟ್ದೆತ್ರ ಪೈಲು ;
ಮೇಜಿನ್'ಮೇಲ್-ಯಾವಾಗ್ಲು ಕಾಲು.
ನಿತ್ಯಾನೂ
ಇದೇ ಮಾಮೂಲು.
ಸರ್ಕ್ಯಾರಿ ಕೆಲ್ಸ, ಸಾರ್, ಸರ್ಕ್ಯಾರಿ ಕೆಲ್ಸ
ಮರ್ತೆ, ನಾ ಫೂಲು ;
(ಸಾಹೇಬರ ಬಯ್ಗ್ಳು !)
ದೇವರ ಕೆಲ್ಸ, ಸಾರ್, ದೇವರ ಕೆಲ್ಸ !

ಹೇಳಿಕೆ—೩

ನೆಟ್ರೆ ನೆಡಬೇಕ್ ತೆಂಗು ;
ಕೊಟ್ರೆ, ಮಗಳಿಗ್ ಕೊಡ್ಬೇಕ್.

—ಬರಕೊಂಡೋನು : ರಾಮಪ್ಪ.

ಲಂಚ್ ಫೀವರ್

—ಗಾಯತ್ರಿ

ಮಟ ಮಟ ಮಧ್ಯಾಹ್ನ. ಆಫೀಸಿನಲ್ಲಿ ಒಬ್ಬನೇ ಕುಳಿತಿದ್ದೆ. Night watchman ಮುನಿಯಪ್ಪ ಮೆಲ್ಲನೆ ಒಳಗೆ ನುಸುಳಿದ. ಕಳೆಗುಂದಿದ ಮುಖ; ನಿದ್ರೆಗೆಟ್ಟ ಕಣ್ಣುಗಳು. ಚಿಂತಾಗ್ರಸ್ತನಾಗಿದ್ದ.

"ಏನು ಮುನಿಯಪ್ಪಾ ಸಮಾಚಾರ"? ಎಂದೆ. ಎಷ್ಟೋ ವರ್ಷಗಳಿಂದ ಭುಜದ ಮೇಲೆ ಇದ್ದ ಟವಲ್ಲನ್ನು ಬಾಯಿಗೆ ಒತ್ತಿ ಹಿಡಿದ.

"ಏನೇಳಲಿ ಸಾಮಿ, ಎಷ್ಟು ಪರಯತ್ನ ಮಾಡಿದರೂ ಸತ್ಯಪ್ಪನ್ನ ಉಳಿಸಿ ಕೊಳ್ಳೋಕೆ ಆಗಲಿಲ್ಲ". ಬಿಕ್ಕಿದ.

ತಲೆ ಕೊಡವಿ ಕೊಂಡೆ. ಇದೇನು?! ಈ ಮುನಿಯನೇನು ಹಿಂದಿನ ಜನ್ಮದಲ್ಲಿ ಸಾವಿತ್ರಿಯಾಗಿದ್ದನೇ?!! ಸತ್ಯಪ್ಪನ್ನ ಉಳಿಸಿಕೊಳ್ಳೋಕೆ?

"ಏನಯ್ಯಾ ಅದು ಸರಿಯಾಗಿ ಹೇಳು"?! ಅಂದೆ.

"ಅಯ್ಯೋ ಅದೆಲ್ಲಾ ದೊಡ್ಡ ಕಥೆ ಸಾಮಿ" ಅಂದ.

Time ನೋಡಿಕೊಂಡೆ. ಇನ್ನೂ ಹನ್ನೆರಡು ಗಂಟೆ. ಇವನ್ಹತ್ರ ತಪ್ಪಿಸಿ ಕೊಂಡು ಮನೆಗ್ಹೋದ್ರ ಕಾದ ಬಾಣಲೆಯಿಂದ ಉರಿಯೋ ಬೆಂಕಿಗೆ ಬಿದ್ದ ಹಾಗೆ. ನನ್ನ ಊಟದ ಸಮಯ ಯಾವಾಗಲೂ ಮ. 2½ ಘಂ. ಇಷ್ಟು ಬೇಗನೆ ಹೋದ್ರೆ— "ಯಾಕ್ರೀ ಇಷ್ಟು ಬೇಗನೆ ಬಂದ್ರಿ?! ಏನಾಯ್ತು ಮೈ ಹುಷಾರಿಲ್ವ? ತಲೆನೋವಾ? ಹಲ್ಲು ನೋವಾ?! ಏನ್ಸಮಾಚಾರ? ನಾನ್ನಿನ್ನೂ ಒಗ್ಗರಣೇನೇ ಹಾಕಿಲ್ಲ. ಪಲ್ಯ ಬೇಯ್ತಾ ಇದೆ—" ಮುಂತಾದ ಕಿರಾತಾ ಎದುರಿಸೋ ಬದಲು, ಮುನಿಯನ ವರಾತವೇ ಮೇಲು ಎನಿಸಿತು.

"ಅದೇನು ಹೇಳಯ್ಯ — ಪೇಪರಿನಲ್ಲಿ ಮುಖ ಹುದುಗಿಸಿದ.

"ನಿನ್ನೆ ರಾತ್ರಿ ಸತ್ಯಪ್ಪ ಬೇಮುಷಾರಾಗಿ ಬಚ್ಚಲಲ್ಲಿ ಬಿದ್ಬಿಟ್ಟ ಸಾಮಿ"

"ಸರಿ ಮಾಮೂಲು ಕುಡ್ದಿರ್ಬ್ಾನೆ" ಬೇಕಾಬಿಟ್ಟಿಯಾಗಿ ಉತ್ತರಿಸಿದೆ.

"ಇಲ್ಲಾ ಸಾಮಿ, ನಾಲಿಗೆ ಈಚೆ ಬಂದು ಬಿಡ್ತು, ಎರಡು ಕಣ್ಣುಗಳು ನೆತ್ತಿ ಮೇಲೆ ಸಿಕ್ಕಿಹಾಕ್ಕೊಂಡು ಬಿಡ್ತು, ಕೈ ಕಾಲು ಸೆಟಗೊಂಡು ಬಿಡ್ತು"!

ಈಗ ನನ್ನ ಕಿವಿಗಳು ಸೆಟಗೊಂಡವು. ದೇವರಿನಿಂದ ಮುಖ ಎತ್ತಿದೆ. ಮುನಿಯನ ಹರಿಕಥಗೆ ಬರೀ ಕಿವಿಗೊಟ್ಟರೆ ಸಾಲದು. ತರೇನೂ ಕೊಡಬೇಕು ಎಂದು ಮನವರಿಕೆಯಾಯಿತು.

"ಆಮೇಲೆ"?

ಆಮೇಲೇನು ಸಾಮಿ? ಎದೆ ಬಡಿತ ನಿಂತ್ಹೋಯ್ತು, ಕೈಕಾಲು ತಣ್ಣಗಾಗೋಯ್ತು"!

"ನನ್ನ ತಲೆ ಬಿಸಿಯಾಯ್ತು! ಮುನಿಯ ಹಿಂದಿನ ಜನ್ಮದಲ್ಲಿ ಬರೀ ಸಾವಿತಿಯಲ್ಲ, Expert physician ನ್ನೂ ಆಗಿರಬೇಕು ಎನಿಸಿತು. ದೇಪರನ್ನು ಬದಿಗೊತ್ತಿ ನೆಟ್ಟಗೆ ಕುಳಿತೆ.

"ತಕ್ಷಣ ಅವನ್ನ ಸಾಬಿ ಗಾಡಿಯಲ್ಲಿ ಹಾಕ್ಕೊಂಡು "ಕರ್ಸಿಂಗ್ ಹೋಮ್"ಗೆ ಹೋದ್ವಿ ಸಾಮಿ"

"ನರ್ಸಿಂಗ್ ಹೋಂ" ಎಂದೆ:.

"ಏನೋ ಒಂದು. ಅಲ್ಲಿ ಒಬ್ಬ ನರಸಮ್ಮ ನಿದ್ದೆಯಿಂದ ಎದ್ದು ಬಂದು ಬಾಗಿಲು ತೆಗೆದು, ಡಾಗ್‌ಟ್‌ರ್‌ನ ಕರ್‍ಕೊಂಡು ಬರೋಕೆ ಓದಳು ಸಾಮಿ. ಒಂದು ಗಂಟೆ ಟೇಮು ಬಿಟ್ಕೊಂಡು ಡಾಗ್‌ಟ್‌ರ್ ಬಂದು ನನ್ನ ನೋಡಿ (ಮುನಿಯ ಬೆಳಿಗ್ಗೆ ಹೊತ್ತು ಮೂಟೆ ಹೊರುವ ಕೂಲಿ, ರಾತ್ರಿ ಹೊತ್ತು ನನ್ನ workshop Gurkha).

"ಈ ಕೇಸು ಇಲ್ಲಾಗಾಕಿಲ್ಲ, ದೊಂಟಲ್ಲು ಆಸ್ಪತ್ರೆಗೆ ತಂಗ್ಕೊಂಡೋಗಿ" ಅಂದ್ರು ಸಾಮಿ.

ಕೇಸು ಯಾಕೋ ಬಹಳ ಸೀರಿಯಾಸ್ಸಾಗ್ತಿದೆ ಅನ್ನಿಸ್ತು. ಆಫೀಸ್ Boy ನ ಕರೆದು ಎರಡು strong coffee ಗೆ ಹೇಳಿದೆ. ಮುನಿಯ ಮುಂದುವರೆಸಿದ.

ಆಚೇನೆ ಅಷ್ಕೊಂತ್ಗಂಡ ಕಾಯ್ತಿದ್ದ ಸಾಬಿ ಗಾಡೀಲಿ ಸತ್ಯಪ್ಪನ್ನ ಆಕ್ಕೊಂಡು,

ಅವನ ಹೆಂಡ್ರು, ತಮ್ಮ, ನಾವೆಲ್ಲಾ ಒಂದೇ ಸ್ಪೀಡ್‌ನಾಗೆ ಆಸ್ಪತ್ರೆಗೆ ಹೋದ್ವಿ ಸಾಮಿ"

ಅಲ್ಲಿ ಟ್ರಚರ್‌ನಾಗೆ ಮಲಗಿಸಿ ಎಳ್ಕೊಂಡು ಹೋದ್ರು. ಸುಮಾರು ಹೊತ್ತಾದ ಮೇಲೆ ಮೂವರು ನರಸುಗಳು ಬಂದು ಸತ್ಯಪ್ಪನ್ನ ಮಾತಾಡ್‌ಸೋಕೆ ಪರಯತ್ನ ಮಾಡ್ತಾನೇ ಇದ್ದರು.

"ಅಯ್ ಅಮ್ಮಾವ್ರೆ ಅವನಿಗ್ ಮಾತ್ ನಿಂತ್ಹೋಗಿ ನಾಲ್ಕ್ ಗಂಟೆ ಟೇಮ್ಹಾ ಗ್ಹೋಯ್ತು. ಪರಾಣ ಏನಾದರೂ ಐತಾ ಅಂತ ಒಸಿ ನೋಡಿ" ಅಂತ ಯೋಳದೆ ಸಾಮಿ. ಅವರು ನನ್ನ ಕೆಕ್ಕರಿಸಿ ನೋಡ್ಕೊಂಡು ಒಳಗ್ಹೋದ್ರು. ಅರ್ಧ ಗಂಟೇಲಿ ನಾಲ್ಕು ಜನ ಡಾಗ್ಟಾರುಗಳು ಬಂದ್ರು. ಅದೇನೋ 'ಜೂಟಿ' ಡಾಗ್ಟಾರಂತೆ"

"Duty Duty" ಅಂದೆ.

"ಅವರಾಲ್ಕು ಜನ ಬೋ ಚೆನ್ನಾಗಿ ನೋಡಿದರು ಸಾಮಿ. ಒಬ್ರು ಒಂದು ಕೈ ಚಾಚಿದರು. ಇನ್ನೊಂದು ಕೈ ಮಡಿಚಿದರು. ಇನ್ನೊಬ್ರು ಕಾಲೆಳೆದು, ಕಣ್ಣು ಬಿಡಿಸಿ ನೋಡಿದ್ರು. ಕಿವಿ ಚುಚ್ಚಿದರು, ಬಾಯಲ್ಲಿ ಕೈ ಆಕಿದರು. ತಲೆ ತಿರುಗಿಸಿದರು, ಸುತ್ತೀಲಿ ಎದೆಮೇಲೆ ಒಡುದ್ರು, ಹೊಟ್ಟೆ ಅದುಮಿದರು, ಕತ್ತು ತಿರುಚಿದರು, ಕೆನ್ನೆಗೆ ಬಾರಿಸಿದ್ರು, ಏನೇನೋ ಮಾಡಿದರು ಸಾಮಿ. ಉಹು, ಏನೂ ಆಗಲಿಲ್ಲ. ನನಗೆ ಗೊತ್ತಾಗ್ಹೋಯ್ತು ಸಾಮಿ. ಈ ಕೇಸು ಬಾಳ ಡೇಂಜರ್ರು ಅಂತ"

ಮುನಿಯ ಹಿಂದಿನ ಜನ್ಮದಲ್ಲಿ ಗ್ಯಾರಂಟಿ Doctor ರೇ ಎಂದು ತೀರ್ಮಾನಿಸಿದೆ.

"ಸತ್ಯಪ್ಪನ್ನ ಜೇಬಿನಲ್ಲಿದ್ದ ಬೆಂಕಿಪೊಟ್ಟಣ ತೆಗೆದು ಸಿಗರೇಟು ಹಚ್ಕೊಂಡು, ಸತ್ಯಪ್ಪನ್ನ ಮುಖದ ಮೇಲೆ ಹೊಗೆಬಿಟ್ಟು ಅವರೆಲ್ಲಾ ಅಲ್ಲೇ ಸುತ್ತಲೂ ನಿತ್ಕೊಂಡು ಅರ್ಧ ಗಂಟೆ "ಕನ್ಸಲ್‌ಟೇಷನ್" ಮಾಡಿದ್ರು ಸಾಮಿ. ನಾನೂ ಒಂದು ಬೀಡಿ ಹಚ್ಕೊಂಡೆ ಸಾಮಿ"

"ಏಯ್ ಇಲ್ಲೆಲ್ಲಾ ಬೀಡಿ ಸೇದಬಾರದು ಆರ್‍ಹೋ" ಅಂತ ಗದರಿದರು ಸಾಮಿ".

ಕಥೆ climax ರೀಚ್ ಆಗ್ತಾ ಇತ್ತು. ಒಂದು ಸಿಗರೇಟ್ ಹಚ್ಕೊಂಡೆ. "ಮುಂದೆ" ಅಂದೆ ಕಾತರದಿಂದ.

ಅವರೆಲ್ಲಾ ಓಗಿ ಇಬ್ರು ದೊಡ್ಡ ಡಾಗ್ಟಾರನ ಕರ್ಕೊಂಡು ಬಂದ್ರು ಸಾಮಿ. ಒಬ್ಬರು ಸತ್ಯಪ್ಪನ್ನ ಕೂದಲು ಮುಟ್ಟಿ ನೋಡಿದರು. "ಯಾರಪ್ಪಾ ಇವರ ಮನೆಯ

ವರು"? ಸತ್ಯಪ್ಪನ್ನ ಹೆಂಡ್ರು ಅಲ್ಲೇ ತೂಕಡಿಸುತ್ತಾ ಕುಂತಿದ್ದಳು. ನನ್ನ ಕರೆದು "ಏನಪ್ಪಾ ಇವರಿಗೆ ತಲೆ ಮಿದುಳು ಆಪರೇಸನ್ನು ಮಾಡಬೇಕು. ಪರಮಿಸನ್ನು ಕೊಡಬೇಕು" ಅಂದ್ರು.

"ಅದಕ್ಕೇನು ಸಾಮಿ ಕೊಡೋಣ ಪರಮಿಸನ್ನು" ಅಂದ. (ಮತ್ತೆ Doubt ಉ. ಮುನಿಯ ಹಿಂದಿನ ಜನ್ಮದಲ್ಲಿ ಮಂತ್ರಿಯಾಗಿದ್ದನೇ?)

"ಅಷ್ಟರಲ್ಲಿ ಇನ್ನೊಬ್ರು ಹೊಟ್ಟೆ ಮುಟ್ಟಿ ನೋಡಿ ಕರುಳಿಗೆ ಮಾಡಬೇಕು ಅಂದ್ರು. ಅದರಲ್ಲೇ ಹೊಟ್ಟೇನೋ, ತಲೇನೋ ಅಂತ ತಗಾದೆ ಶುರು ಮಾಡಿದ್ರು ಸಾಮಿ. ನನಗ್ಯಾಕೋ ರೇಗ್ಹೋಯ್ತು ಸಾಮಿ.

"ಸಾರ್, ತಲೆ ಮಿದುಳು ತೆಗೆದು ಹೊಟ್ಟೇಗ್ ಹಾಕ್ತೀರೋ ಹೊಟ್ಟೆ ಕರುಳ್ ತೆಗೆದು ತಲೇಗ್ ಹಾಕ್ತೀರೋ, ಅದೇನ್ ಮಾಡ್ತೀರೋ ಬೇಗನೆ ಮಾಡ್ರಿ, ನಾನು ಪರಮಿಸನ್ನು ಕೊಡ್ತೀನಿ" ಅಂದೆ.

"ಅಪರೇಸನ್ನು ಅರ್ಜಂಟಾಗಿ ಆಗಬೇಕು. ನೀನ್ಹೋಗಿ 600 ರೂಪಾಯಿ ಕ್ಯಾಷ್ ಕಟ್ಟಿ ರಸೀತಿ ತಗ್ಹೊಂಡ್ ಬಾ, ತಕ್ಷಣ ಮಾಡ್ತೀವಿ" ಅಂದ್ರು ಸಾಮಿ.

ತೂಕಡಿಸುತ್ತಿದ್ದ ನಿಂಗವ್ವನನ್ನು ಎಬ್ಬಿಸಿ, ಅವಳ ಮೂಗಲಿದ್ದ ನತ್ತುಗಳನ್ನು ಇಸ್ಕೊಂಡು, ಮನೇಗ್ ಬಂದು, ನನ್ನೆಂಡ್ತಿಗೆ ನಾಲ್ಕೊದ್ದು, ಅವಳ ಕಿವೀಲಿದ್ದ ವಾಲೇನ ಕಿತ್ಕೊಂಡು, ಸೇಠ್ ಹತ್ರ ಅಡವಿಟ್ಟು, ಸಾಬಿ ಜಟಕಾದಾಗೆ ಆಸ್ಪತ್ರಿಗೆ ಹೋಗಿ ಕ್ಯಾಷ್ ಕಟ್ಟಿ, ರಸೀತಿ ಇಸ್ಕೊಂಡು ಹೋದೆ ಸಾಮಿ. ನಾನ್ ವರಾಂಡಗೆ ಹೋಗೋ ಹೊತ್ಗೆ ನಿಂಗವ್ವ "ಓ" ಅಂತ ಅಳ್ತಿದ್ಳು ಸಾಮಿ. ಸತ್ಯಪ್ಪ ಸ್ಟ್ರೆಚರ್ ನಾಗೆ ಎಂಗಿದ್ದನೋ ಅಂಗೇ ಇದ್ದ ಸಾಮಿ. ನನ್ನ ನೋಡ್ದಾಲೆ ಡಾಗ್ಟ್ರು "ಏನೋ ಪ್ರಾಣ ಓದ ಮೇಲೆ ಬಂದಿದ್ದೀಯಾ. ನಿಮ್ಮ ಹಣೇಬರಹನೇ ಇಷ್ಟು. ಟೇಮ್ ಸರಿಯಾಗಿ ಬಂದಿದ್ರೆ ಏನಾರ ಮಾಡ್‌ಬೋದಿತ್ತು ಅಂತಾ ಸಿಕ್ಕಾಪಟ್ಟೆ ರೇಗಾಡಿದರು ಸಾಮಿ" ಅಂತ ಗೋಳಾಡಿದ.

"ಟ್ರಿಣ್ ಟ್ರಿಣ್" ಟೇಲಿಫೋನ್ ರಿಂಗಾಯಿತು. ರಿಸೀವರೆತ್ತಿ ಕಿವಿಗಿಡಿದೆ.

"ಏನ್ರೀ ಗಂಟೆ ಎರಡು ಮುಕ್ಕಾಲಾಯಿತು? ಮನೆಕಡೆ ಜ್ಞಾನ ಇಲ್ಲವಾ? ಎಷ್ಹೊತ್ತಿಂದ ಟೇಬಲ್ ಮೇಲೆ ರೆಡಿಯಾಗಿಟ್ಟಿದ್ದೀನಿ. ಏನ್ ಮಾಡ್ತಾ ಇದ್ದೀರಾ? ಏನ್ಸಮಾಚಾರ" ಗುಡುಗಿದಳು **housewife** ಉ.

"ಇದೋ ಬಂದೆ ಬಂದೆ" ಅನ್ನುತ್ತಾ **phone disconnecti**ಸಿದೆ.

ಶಾಮು ಕಳ್ಳನ್ನ ಹಿಡಿದದ್ದು

—ಆನಂದ್


ನಾವೆಲ್ಲ ಸ್ಕೂಲಲ್ಲಿ ಓದುತ್ತಿದ್ದ ಕಾಲ. ನಂ ಚಿಕ್ಕಪ್ಪ ಶಾಮು ನಮ್ಮನೇಲೇ ಇದ್ದದ್ದು. ಶಾಮು ನಮ್ಮ ಮನರಂಜನೆ ಮಾಡೋದ್ರಲ್ಲಿ ಎತ್ತಿದ ಕೈ. ನಿಜವಾದದ್ದು, ಅಲ್ಲದ್ದು ಎಲ್ಲಾನೂ ಕತೆ ಕತೆಯಾಗಿ ಹೇಳ್ತಾ ಇದ್ರೆ ನಾವೆಲ್ಲ ಬಾಯಿ ಬಿಟ್ಟುಕೊಂಡು ಕೇಳ್ತಾ ಇರ್‍ತಿದ್ವಿ. ಒಂದು ದಿನ ಬೆಳಗ್ಗೆ ಕಾಂಪೌಂಡ್‌ನಲ್ಲಿ ನೋಡ್ತೀವಿ! ಎರಡು ಪಾಟ್ ಗಳು ನಾಪತ್ತೆ! ಮಾರುದಿನ ಇನ್ನೆರಡು ಪಾಟ್‌ಗಳು ಮಾಯವಾಗಿದ್ವು. ಶಾಮು ನಾಟಕದ ರಾಕ್ಷಸನಂತೆ ಗರ್ಜಿಸಿದ! 'ರಾತ್ರೀ ಯಾವೋನೋ ಬಂದು ಕದೀತಿದಾನೆ. ಷರ್ಲಾಕ್ ಹೋಂಸ್ ಪಂಥದವನಲ್ಲದಿದ್ರೂ ಶಾಮುಗೆ ಬುದ್ಧಿ ಚುರುಕಾಗಿತ್ತು. ಶಾಮು ನಮಗೆಲ್ಲ ಹೇಳಿದ — ನೋಡ್ರೋ, ಈ ರಾತ್ರಿ ಇದೇ ಕಳ್ಳ ತಿರುಗೀ ಬರ್‍ತಾನೆ! ನಾನು ರಾತ್ರಿ ಎಲ್ಲ ಜಾಗರಣೆ ಮಾಡಿ, ಅವನ್ನ ಹಿಡಿದು ಹಾಕ್ತೀನಿ! ಪೋಲೀಸ್‌ನೋರಿಗೆ ಒಪ್ಪಿಸಿದ್ರೆ, ನಂ ಪಾಟುಗಳೆಲ್ಲ ಸಿಗಬೋದು !!" ನಾವೆಲ್ಲ ಈ ಧೀರತ್ವದ ಪ್ರದರ್ಶನ ನೋಡಿ ಸಂತುಷ್ಟರಾದೆವು. ನಾವೂ ಎದ್ದಿರ್‍ತೀವಿ ಚಿಕ್ಕಪ್ಪಾ ಅಂತ ಶುರು ಮಾಡಿದೆವು. ಬೇಡ ಕಣ್ರೋ, ಇವೆಲ್ಲ ದೊಡ್ಡೋರ ಮಾತು ಅಂತ ನಂ ಬಾಯಿ ಮುಚ್ಚಿಸಿದ ಶಾಮು. ನಾನು, ನನ್ನ ತಮ್ಮ ಇಬ್ರೂ ಈ ರಾತ್ರಿ ಪ್ರಸಂಗ ನೋಡೇ ಬಿಡಬೇಕು ಅಂತ ಅಂದು ಕೊಂಡ್ವಿ. ಶಾಮು ತನ್ನ ರೂಮಿನ ಬಾಗಿಲ ಹತ್ರಾನೇ ಕೂತೆ, ಊಟ ಆದ ಮೇಲೆ. ನಾನು, ರಾಮಿ ಇಬ್ರೂ ಹತ್ತೂವರೆ ಹೊತ್ತಿಗೆ ನಿದ್ರೆ ಮಾಡಿದ ಹಾಗೇ ನಟಿಸಿದೆವು.

ಸುಮಾರು ಎರಡು ಗಂಟೆ ಇರಬೇಕು. ನನಗೆ ಬಾಗಿಲು ಕಿರ್ ಅಂದದ್ದು ಕೇಳಿ ಸಿತು. ಜಗ್ಗಂತ ಎದ್ದ. ರಾಮು ಗೊರಕ ಹೊಡೀತಾ ಮಲಗಿದಾನೆ! ಶಾಮು ಬಾಗಿಲು ತೆಗದು ನೋಡ್ತಿದಾನ.-ಹೊರಗೆ ಕುಳ್ಳ, ದೃಢಕಾಯ ಕಳ್ಳನೊಬ್ಬ ಕಾಂಪೌಂಡ್ ಗೋಡೆ ಹಾರಿ ಬಂದ. ಒಂದು ಪಾಟ್ ತೆಗೆದುಕೊಂಡು ಮೆಲ್ಲಗೆ ಹೊರಟ. ಶಾಮು ಸ್ವಲ್ಪ ಹೊತ್ತು ಬಿಟ್ಟು ಓಡಿದ, ಅವನ ಹಿಂದೆ! ನಾನೂ ಹಿಂಬಾಲಿಸಿದೆ. 'ಕಳ್ಳಾ, ಕಳ್ಳಾ ಅಂತ ಕೂಗ್ತಾ ಶಾಮು ಓಡಿದ! ಕಳ್ಳ ಪಾಟನ್ನ ಕೆಳಗೆ ಕೆಡವಿ ಧಾವಿಸಿದ, ಪಾಟು ನೂರು ಚೂರಾಯ್ತು. ಇದರಿಂದ ಶಾಮು ಕೋಪ ಜಾಸ್ತಿಯಾಯ್ತು! ಹೋ ಅಂತ ಕೂಗ್ತಾ ಕಳ್ಳನ ಹಿಂದೆ ಓಡಿದ. ಕಳ್ಳ ಸ್ವಲ್ಪ ಹೊತ್ತು ಓಡಿದ ಮೇಲೆ ಹಠಾತ್ತನೆ ನಿಂತ! ಬ್ರೇಕ್ ಹಾಕಿದ ಹಾಗೆ ಶಾಮು ಸಹಿತ ನಿಂತ! ನಾನು ದೂರದಿಂದ


ಈ ದೃಶ್ಯ ನೋಡ್ತಾ ನಿಂತೆ. ಕಳ್ಳ ಒಂದು ಚಾಕು ತೆಗೆದ! ಮನೋಹರವಾದ ಬೆಳದಿಂಗಳಲ್ಲಿ ಚಾಕು ಹೊಳೆಯಿತು! ನನ್ ಹಿಡಿಯುಕ್ ಬರ್ತೀಯೇನೋ ಅಂತ ಕಳ್ಳ ಶಾಮು ಕಡೇಗೆ ಓಡಿ ಬಂದ. ಶಾಮು ಸತ್ತೆನೋ ಅಂತ ಮನೇ ಕಡೇಗ ಓಡಿದ! ಯಾವ ಉಪಾನೂ ಅವನ್ನ ಅವತ್ತು ಸೋಲಿಸಲು ಆಗ್ತಿರಲಿಲ್ಲ!! ವಿಡಿಯೋದಲ್ಲಿ ರಿವರ್ಸ್ ಹಾಕಿದ ಸೀನಿನಂತೆ ಕಳ್ಳ ಶಾಮುನ ಹಿಡಿಯೋ ದೃಶ್ಯ ನೋಡಲು ನನಗೆ ಸಾಧ್ಯವಾಗಲಿಲ್ಲ! ಯಾಕೆ ಅಂದ್ರೆ ನಾನೇ ಈ ರೇಸ್‌ನಲ್ಲಿ ಮೊದಲು ಮನೆ ಸೇರಿದ್ದು! ನಾನು ಬಾಗಿಲ ಹತ್ರ ಬರೋದರಲ್ಲಿ ಶಾಮು ಬುಸ್ ಬುಸ್ ಅಂತ ಬಂದ.


*   *   *   *

ಮಾರನೆ ದಿನ ಶಾಮು ಎಲ್ಲರಿಗೂ ಹೇಳಿದ ಕತೇನೇ ಬೇರೆ ಅನ್ನಿ! ನಾನು ಸುಮ್ಮನಿರಲು ಮಾವಳ್ಳಿ ಹೋಟಲ್ ದೋಸೆ ಕೂಡ ಅವನಿಗೆ ಖರ್ಚಾಯಿತು!!



"ರಾಯರು ಕ್ರಿಕೆಟ್ ಮ್ಯಾಚ್ ನೋಡಲು ಹೊರಟಾಗ ! "





REGISTERED No. BGW-180

